# ಕೊಡಗು ಸಂಗಾತಿ

ಸಂಪಾದಕಿ : ಪಟ್ಟಡ ಶೀಲಾಮಣಿ

ಕನ್ನಡ ಮತ್ತು ಅರೆಭಾಷೆಯ ಏಕೈಕ ಪಾಕ್ಷಿಕ ಪತ್ರಿಕೆ

K.R.N.N. 240 ಸಂಪುಟ : 3 ಸಂಚಿಕೆ : 8 ಏಪ್ರಿಲ್ 15 ರಿಂದ 30, 1999 ಪುಟಗಳು : 24 ರೂ 5.



[ಲೇಖನ ಒಳಪುಟಗಳಲ್ಲಿ]

## ಪಶ್ಚಿಮ ಘಟ್ಟದ ಕಾವೇರಿ ತಾಯಿಯ ವರಪುತ್ರ
## ಕಾವ್‌ನಾಡಿನ ಹಿರಿಯ ಸಮಾಜ ಸೇವಾ ಮುತ್ಸದಿ ದಿ|| ನಂಗಾರು ಮುತ್ತಣ್ಣ

## ನಿಮಗೆ ಬರೆಯುವ ಹವ್ಯಾಸವಿದೆಯೇ ?

**ಅರ್ಥಪೂರ್ಣ, ಆಸಕ್ತಪೂರ್ಣ ಹಾಗೂ ವೈವಿಧ್ಯಮಯವಾದ ಸಚಿತ್ರ ಲೇಖನಗಳನ್ನು ನೀವು ಬರೆಯಬಲ್ಲಿರಾದರೆ ನಮಗೆ ಬರೆಯಿರಿ**

ನಿಮ್ಮ ಬರವಣಿಗೆಗೆ ವಸ್ತು ಏನೂ ಆಗಬಹುದು. ನಿಸರ್ಗ, ಕುತೂಹಲ ಕೆರಳಿಸುವ ಸಂಗತಿ, ಸಂಸ್ಕೃತಿ, ಆಚಾರ-ವಿಚಾರ, ಹಬ್ಬ-ಹರಿದಿನ, ಸಂಪ್ರದಾಯ, ಸೌಂದರ್ಯ, ಮಕ್ಕಳ ಸಾಹಿತ್ಯ-ಹೀಗೆ ಅದೇನಾದರೂ ಚಿಂತೆಯಿಲ್ಲ. ಆದರೆ ನೀವು ಆಯ್ಕೆ ಮಾಡಿಕೊಳ್ಳುವ ವಿಷಯ ಮಾತ್ರ ವೈಶಿಷ್ಟ್ಯಪೂರ್ಣವಾಗಿರಲೇ ಬೇಕು. ಬರವಣಿಗೆ ಸ್ಪುಟವಾಗಿದ್ದು, ಹಾಳೆಯ ಒಂದೇ ಮಗ್ಗುಲಿನಲ್ಲಿ ಬರೆಯಿರಿ, ನಿಮ್ಮ ಹಸ್ತ ಪ್ರತಿಯಲ್ಲಿ ಲೇಖನ ಸ್ವತಂತ್ರವೇ ಎಂಬುದನ್ನು ಬರೆಯಲು ಮರೆಯದಿರಿ. ಹಸ್ತಪ್ರತಿಯ ಕೊನೆಯಲ್ಲಿ ನಿಮ್ಮ ವಿಳಾಸವನ್ನು ತಪ್ಪದೆ ಬರೆಯಿರಿ.

**ಸಂಪಾದಕರು,**

ಕೊಡಗು ಸಂಗಾತಿ, ನಂ. 35, "ಸವಿತಾ ನಿಲಯ"
1ನೇ ಕ್ರಾಸ್, 4ನೇ ಬ್ಲಾಕ್, ಡಿವಿಜನಲ್ ಟೆಲಿಕಾಂ
ಕಛೇರಿ ಹತ್ತಿರ, ಜಯಲಕ್ಷ್ಮಿಪುರಂ, ಮೈಸೂರು-12

---

## 6ನೇ ವರ್ಷದ ಚಿರಸ್ಮರಣೆ

ಮರಣ : **29-4-1994**

ನೀವು ನಮ್ಮನ್ನಗಲಿ ಇಂದಿಗೆ 6 ವರ್ಷಗಳಾದವು. ನಿಮ್ಮ ಸವಿನೆನಪು ಇಂದಿಗೂ ನಮ್ಮ ಮನಸ್ಸಿನಲ್ಲಿ ಹಚ್ಚ ಹಸಿರಾಗಿಯೇ ಉಳಿದಿದೆ. ನೀವು ಅಂದು ತೋರಿಸಿ ಕೊಟ್ಟ ಮಾರ್ಗದರ್ಶನದಲ್ಲಿ ನಾವು ಮುನ್ನಡೆಯುತ್ತಿದ್ದೇವೆ. ಆ ಭಗವಂತನು ನಿಮಗೆ ಸದಾ ನೆಮ್ಮದಿಯನ್ನು ನೀಡಲಿ ಎಂದು ಆಶಿಸುವ.



ಸಟ್ಟೀಜನ ಸುಬ್ಬಯ್ಯ

ಪತ್ನಿ ಮಕ್ಕಳು ಮತ್ತು ಅಳಿಯಂದಿರು
ರಂಗಸಮುದ್ರ ಗ್ರಾಮ, ಕುಶಾಲನಗರ, ಕೊಡಗು.

---

## Air Force Personnels get to gether

It is proposed to hold a get to gether of retired Air force personnel somewhere in the month of May 1999. Interested persons are requested to contact with their full address to under mentioned address.

☎ : 08272 / 29387

**M.W.O. K.M. APPAJI**
**11B, 162, New Extension,**
**Madikeri-571 201**

# ಕೊಡಗು ಸಂಗಾತಿ

ಸಂಪಾದಕಿ, ಪ್ರಕಾಶಕಿ :
**ಪಟ್ಟಡ ಪಿ. ಶೀಲಾಮಣಿ**
ಗೌರವ ಸಂಪಾದಕ :
**ಪಟ್ಟಡ ಎಂ. ಪ್ರಭಾಕರ**
ಮುದ್ರಕರು :
**ಮಣ್ಣಂಡ್ರ ಕೆ. ತಮ್ಮಯ್ಯ**

ಚಂದಾ ಕಳುಹಿಸುವ ಮತ್ತು
ಜಾಹೀರಾತು ಪ್ರಸಾರ ಕಛೇರಿ :
**ಕೊಡಗು ಸಂಗಾತಿ**
ನಂ. 35, **"ಸವಿತಾ ನಿಲಯ"**
1ನೇ ಕ್ರಾಸ್, 4ನೇ ಬ್ಲಾಕ್,
ಡಿವಿಜನಲ್ ಟೆಲಿಕಾಂ ಕಛೇರಿ ಹತ್ತಿರ,
ಜಯಲಕ್ಷ್ಮಿಪುರಂ, ಮೈಸೂರು–12.
ಫೋನ್ : 0821/516771

**–ಸಂಪರ್ಕಿಸುವ ವಿಳಾಸ–**

**ಮಣಿ ಸಂಗಾರ್**
ಹೊಳ್ಳ ಕಾಂಪ್ಲೆಕ್ಸ್, ಮಂಗಳೂರು ರಸ್ತೆ,
ಚಿಕ್ಕಪೇಟೆ, ಮಡಿಕೇರಿ–571 201
ದೂರವಾಣಿ : 08272/29372

**ಬೈತಡ್ಕ ಜಾನಕಿ ಬೆಳ್ಯಪ್ಪ**
ನಂ. 21–16 ಎಲ್.ಐ.ಸಿ. ಹತ್ತಿರ
ರೇಸ್ ಕೋರ್ಸ್ ರಸ್ತೆ, ಮಡಿಕೇರಿ
ದೂರವಾಣಿ : 08272/28047

**ಕುಂಭಗೌಡನ ಸೋಮಣ್ಣ**
ಮಯೂರ ಕೋಲ್ಡ್ ಸ್ಟೋರೇಜ್
ಮುಖ್ಯ ರಸ್ತೆ, ಕುಶಾಲನಗರ–571234

**ಅಮ್ಮಾಜೀರ ಪೊನ್ನಪ್ಪ /**
**ಕಲ್ಲುಮುಟ್ಲು ಬಸಪ್ಪ**
20, 1ನೇ ಮೈನ್, 4ನೇ ಕ್ರಾಸ್
ಸಾಕಮ್ಮ ಗಾರ್ಡನ್, ಬಸವನಗುಡಿ,
ಬೆಂಗಳೂರು-04
ದೂರವಾಣಿ–080/6549669


## ಒಳನೋಟ


ಪುಟಗಳು

- ಸಂಪಾದಕೀಯ 2
- ಪಶ್ಚಿಮ ಘಟ್ಟದ ಕಾವೇರಿ ತಾಯಿಯ ವರಪುತ್ರ ತಾವ್‌ನಾಡಿನ ಹಿರಿಯ ಸಮಾಜಸೇವಾ ಮುತ್ಸದಿ ದಿ|| ಸಂಗಾರು ಮುತ್ತಣ್ಣ 3
- ಕೊಡಗಿನ ಯೋಧ : ಶಿಸ್ತಿನ ಸಿಪಾಯಿ ಲೆಫ್ಟಿನೆಂಟ್ ಕರ್ನಲ್ ಕುಯ್ಯಮುಡಿ ಸುಬ್ಬಯ್ಯ ಪ್ರಭಾಕರ್ [ನಿವೃತ್ತ] 4
- ಸಂಗಾತಿಯ ಮೂರನೇ ವರ್ಷದ ಆರಂಭ 5
- ಆರೋಗ್ಯ ಚಿಂತನ : ಚರ್ಮದ ಸಂರಕ್ಷಣೆ 6
- ಗೌಡರ ವಿವಾಹ ಪದ್ಧತಿಯ ಅವಲೋಕನ 7
- ಸರ್ಪಗಂಧ ! ಧಾರವಾಹಿ-4 10
- ಸಾಂಸಾರಿಕ ಜೀವನದಲ್ಲಿ ಎದುರಾಗುವ ತೊಡಕುಗಳನ್ನು ಸಮಾಜ ಬಗೆಹರಿಸುವುದೇ ? 12
- ಸಂಘರ್ಷದ ಹಾದಿಯಲ್ಲಿ ಕೊಡಗು... ಪರಿಹಾರವೇನು ? 13
- ಕವನ 14
- ನಗೆಹನಿ : ಪಜಲ್ 15
- ಪತ್ರಗಳ ವಿಭಾಗ 16


## ಅರೆ ಭಾಷೆರ ವಿಭಾಗ


- ಕರಿ ಚಿನ್ನ ಧಾರಾವಾಹಿ-24 17
- ಕಟ್ಟ್ ಬಳ್ಳಿ ಕುಟ್ಟ್‌ಪುಡೊಣ್ಣೆ [ಅಜ್ಜಿ ಕಥೆ] 19
- ಕವನ [ಅಂಬಾಡಿನ ಕಥೆ] 20



**ಚಂದಾ ವಿವರ**

| | | |
|---|---|---|
| ಬಿಡಿ ಪ್ರತಿ | : | 5 ರೂ. |
| ಅರ್ಧ ವಾರ್ಷಿಕ | : | 60 ರೂ. |
| ವಾರ್ಷಿಕ ಚಂದಾ | : | 120 ರೂ. |

# ಸಂಪಾದಕೀಯ :

## ನವನಾಗರೀಕರ ಕಾರ್ಯವೈಖರಿ :

ದಿನಗಳು ಉರುಳಿದಂತೆ ಮಾನವನು ನಾಗರೀಕನೆಂದು ಹೇಳಿಕೊಳ್ಳುವುದಕ್ಕೆ ಹಾತೊರೆಯುತ್ತಾನೆ. ಆದರೆ ನಾಗರೀಕತೆಯ ತತ್ವವನ್ನು ಆಚರಿಸುವುದರಲ್ಲಿ ಯಾವುದೇ ರೀತಿಯ ಅಭಿವೃದ್ಧಿಯ ದಾರಿಯನ್ನು ಕಾಣುವುದಿಲ್ಲ. ಈಗ ಕೊಡಗಿನಲ್ಲಿ ಸಾಮಾನ್ಯವಾಗಿ ಪ್ರತಿ ಗ್ರಾಮಕ್ಕೆ ಒಂದು ರಸ್ತೆ ಆಗಿದೆ. ಕೆಲವು ಗ್ರಾಮಗಳಲ್ಲಿ ಪೂರ್ತಿ ಡಾಂಬರೀಕರಣವಾಗಿದೆ. ಇನ್ನು ಕೆಲವು ರಸ್ತೆಗಳಿಗೆ ಜೆಲ್ಲಿಕಲ್ಲು ಹಾಕಲಾಗಿದೆ. ಹಿಂದಿನ ಕಾಲದಲ್ಲಿ ಗ್ರಾಮದ ಜನರೆಲ್ಲರೂ ಒಗ್ಗಟ್ಟಾಗಿ ಸುಮಾರು ಸೆಪ್ಟೆಂಬರ್ ತಿಂಗಳಿಂದಲೇ ತಮ್ಮ ಗ್ರಾಮದ ರಸ್ತೆಗಳನ್ನು ಗ್ರಾಮಸ್ಥರೆ ದುರಸ್ತಿ ಮಾಡುತ್ತಿದ್ದರು. ಈಗ ಆ ರೀತಿಯ ಸಹಕಾರ ಹೊಂದಾಣಿಕೆ ಮಾಯವಾಗಿದೆ. ಬದಲು ಸರಕಾರದವರು ರಸ್ತೆ ಬದಿಯಲ್ಲಿ, ರಸ್ತೆ ದುರಸ್ತಿಗಾಗಿ ಹಾಕಿರುವ ಜೆಲ್ಲಿಕಲ್ಲನ್ನು ಯಾರು ಕಾಣದಿರುವಾಗ ತಮ್ಮ ತಮ್ಮ ಮನೆಗಳಿಗೆ ಸಾಗಿಸಿ ಉಪಯೋಗಿಸುತ್ತಿದ್ದಾರೆ. ಸೇತುವೆಯ ಎರಡು ಬದಿಗಳಲ್ಲಿ ಸುರಕ್ಷೆಗಾಗಿ ಹಾಕಿದ ಕಬ್ಬಿಣದ ಸರಳು, ಕೊಳವೆಗಳನ್ನು ತಮ್ಮ ಸ್ವಂತ ಕೆಲಸಗಳಿಗಾಗಿ ಅಲ್ಲಿಂದ ಸ್ಥಳಾಂತರಿಸುತ್ತಾರೆ. ಸಾರ್ವಜನಿಕರ ಉಪಯೋಗಕ್ಕಾಗಿ ಗ್ರಾಮದ ಶಾಲೆಯ ಸುತ್ತಲೂ ಹಾಕಿದ ತಂತಿ ಬೇಲಿಯನ್ನು, ಕಲ್ಲಿನ ಕಂಬಗಳನ್ನು, ಚಪ್ಪಡಿಗಳನ್ನು ಒಂದೊಂದಾಗಿ ಕಳುವು ಮಾಡಿ ಬೇಲಿಯೇ ಇಲ್ಲದಂತೆ ಮಾಡುತ್ತಾರೆ. ಈ ರೀತಿಯ ನೀಚ ಮತ್ತು ನಾಚಿಕೆ ಕೆಲಸವನ್ನು ಸಾರ್ವಜನಿಕರ ಗಣನೆಗೆ ಬಂದರೂ ಸಹ ಯಾರು ಏನೂ ಮಾತಾಡದೆ ಸುಮ್ಮನಿರುತ್ತಾರೆ. ಆದರೆ ಹಿಂದಿನ ಕಾಲದಲ್ಲಿ ಸಾರ್ವಜನಿಕ ಸ್ಥಳಗಳಾದ ದೇವಸ್ಥಾನ, ಶಾಲೆ ಮುಂತಾದ ಸ್ಥಳಗಳನ್ನು ಆದೊಂದು ಪುಣ್ಯ ಸ್ಥಳವೆಂದು ಪರಿಗಣಿಸಿ ಅವುಗಳನ್ನು ಸುಭದ್ರವಾಗಿಡಲು ಪ್ರಯತ್ನಿಸುತ್ತಿದ್ದರು. ನಾಗರೀಕರಲ್ಲದ ಮುಗ್ಧಜನರಾದ್ದರಿಂದ ನವ ನಾಗರೀಕರು ಈಗ ಮಾಡುತ್ತಿರುವ ನೀಚ ಹೇಯ ಕೆಲಸವನ್ನು ನಾಗರೀಕತೆ ಪಡೆದವರು ಸಹ ಮಾಡಬಹುದೇ? ಅರಿಭಾಷಿಕರು ಎಂದೂ ಇಂತಹ ಹೇಯ ಕೆಲಸವನ್ನು ಮಾಡಬಾರದೆಂಬುದೆ ಆಗಿದೆ. ಗ್ರಾಮಸ್ಥರೆಲ್ಲರೂ ಹಿಂದಿನ ತರಹ ಒಗ್ಗಟ್ಟಿನಿಂದ ಸಾರ್ವಜನಿಕ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದು ಗ್ರಾಮದ, ಜಿಲ್ಲೆಯ, ರಾಜ್ಯದ ಮತ್ತು ದೇಶದ ಹಿತದೃಷ್ಟಿಯಲ್ಲಿ ಮಹೋನ್ನತದ ಕಾರ್ಯವಾಗಿದೆಯೆಂಬುದು ಸಂಗಾತಿಯ ನಿಲುವು ಆಗಿರುತ್ತದೆ.

○

## ಭಜನೆಗಳು—ಸ್ವರಚಿತ

ಓಂ ಜಗಜ್ಜನನಿ ಕಾವೇರಿಯೇ
ಓಂಕಾರ ರೂಪಿಣಿ ಕಾವೇರಿಯೇ
ಅಭಯ ದಾಯಿನಿ ಕಾವೇರಿಯೇ
ಅನಾಥ ರಕ್ಷಕಿ ಕಾವೇರಿಯೇ.

ಕಲಿಯುಗವತಾರ ಭಗಂಡೇಶ್ವರನೇ
ಕರುಣಾ ಸಿಂಧು ಭಗವಂತನೇ
ಭಾಗಮಂಡಲ ಭಗಂಡೇಶ್ವರನೇ
ಬಾಗಿ ನಮಿಪೆನು ಭಗಂಡೇಶ್ವರನೇ.

ಜಗದೋದ್ಧಾರ ಬ್ರಹ್ಮ ವಿಷ್ಣುವೇ
ಮನಸ್ಸನ್ನುದ್ಧಾರ ಭಗಂಡೇಶ್ವರನೇ
ಹೃದಯವಾಸಿ ವಿಘ್ನೇಶ್ವರನೇ.
ಬ್ರಹ್ಮನ ಮಗಳೇ ನಮೋ ನಮೋ

ಲೋಪಾಮುದ್ರೆಯೆ ನಮೋ ನಮೋ
ಅಗಸ್ತ್ಯನ ಪ್ರೇಯಸಿಯೇ ನಮೋ ನಮೋ
ಕನ್ನಿಕೆ ರೂಪಿಣಿ ನಮೋ ನಮೋ
ಬ್ರಹ್ಮಕುಂಡಿಕೆ ರೂಪಿನಿ ನಮೋ ನಮೋ
ತೀರ್ಥ ಸ್ವರೂಪಿನಿ ನಮೋ ನಮೋ
ಗುಪ್ತಗಾಮಿನಿ ನಮೋ ನಮೋ
ತ್ರಿವೇಣಿ ವಾಹಿನಿ ನಮೋ ನಮೋ
ದಿವ್ಯ ಸ್ವರೂಪಿಣಿ ನಮೋ ನಮೋ
ಭವ್ಯ ಕಾವೇರಿ ರೂಪಿನಿ ನಮೋ ನಮೋ
ಮೋಕ್ಷ ಪ್ರದಾಯಿನಿ ನಮೋ ನಮೋ.

ನಾವು ತೀರ್ಥ ಸೇವನೆ ಮಾಡುವಾಗ ಸ್ಮರಿಸಬೇಕಾದ ನಾಲಿಗೆಯಲ್ಲಿರಬೇಕಾದ ಮಂತ್ರ

"ಪರಮ ಪವಿತ್ರಂ ಕಾವೇರಿ ತೀರ್ಥಂ
ಪರಮಂ ವಿಚಿತ್ರಂ ಕಾವೇರಿ ತೀರ್ಥಂ
ಪರಮಾರ್ಥ ಮಿಷ್ಟಾರ್ಥ ಮೋಕ್ಷಪ್ರಧಾನಂ
ಕಾವೇರಿ ತೀರ್ಥಂ ಇದಮಾಶ್ರಯಾಮಿ.

—ಚೇಂದ್ರಿಮಾಡ ಗ. ಮುತ್ತಪ್ಪ,
ಕುಶಾಲನಗರ

# ಪಶ್ಚಿಮಘಟ್ಟದ ಕಾವೇರಿ ತಾಯಿಯ ವರಪುತ್ರ
# ತಾವ್‌ನಾಡಿನ ಹಿರಿಯ ಸಮಾಜಸೇವಾ ಮುತ್ಸದಿ ದಿ|| ನಂಗಾರು ಮುತ್ತಣ್ಣ

ಭಾಗಮಂಡಲ ನಾಡಿನ ಕೋರಂಗಾಲ ಗ್ರಾಮದ ಶ್ರೀ ನಂಗಾರು ಮಾಲಿಂಗ ಮತ್ತು ಶ್ರೀಮತಿ ನಂಜಮ್ಮ ದಂಪತಿಗಳ ಪುತ್ರರಾಗಿ 1894ರಲ್ಲಿ ಜನಿಸಿದರು. ತಾನು ಹುಟ್ಟಿದ ನಾಡು ಅಂದು ಕುಗ್ರಾಮವಾಗಿ ಕಾವೇರಿ ಮಡಿಲಲ್ಲಿದ್ದರು ಸಹ ಯಾವುದೇ ಅಭಿವೃದ್ಧಿಯನ್ನು ಹೊಂದದ ನಾಡಾಗಿತ್ತು. ಇಂದು ಸಹ ಅಷ್ಟಕಷ್ಟೆ. ಇಪ್ಪತ್ತನೇ ಶತಮಾನದ ಪೂರ್ವದಲ್ಲಿ ವಿದ್ಯೆಯಲ್ಲಿಯೂ, ಆರ್ಥಿಕವಾಗಿಯೂ ಬಹಳ ಹಿಂದುಳಿದಿದ್ದ ಭಾಗಮಂಡಲ ನಾಡಿಗೆ ಶ್ರೀಯುತರು ಮಾಡಿದ ಸೇವೆ ಮಾತ್ರ ಅಪಾರ.

70 ವರ್ಷಗಳ ಹಿಂದೆ ಇಡೀ ತಾವ್‌ನಾಡಿಗೆ ಭಾಗಮಂಡಲ ಪಟ್ಟಣದಲ್ಲಿ ಮಾತ್ರ ಏಕೈಕ ಪ್ರಾಥಮಿಕ ಶಾಲೆಯಿತ್ತು. ಆಗ ದಟ್ಟ ಮರ ಕಾಡುಗಳಿಂದಲೂ ಅತೀ ಹೆಚ್ಚು ಅಂದರೆ 300 ಇಂಚುಗಳಿಗಿಂತ ಹೆಚ್ಚು ಮಳೆ ಬೀಳುವ ದಟ್ಟಡವಿಗಳಿಂದಲೂ ಆವೃತ್ತವಾಗಿರುವ ಅರಣ್ಯ ಪ್ರದೇಶದ ತಪ್ಪಲಿನಲ್ಲಿದ್ದ ಭಾಗಮಂಡಲದಲ್ಲಿ ವರ್ಷದ 5, 6 ತಿಂಗಳು ಜಡಿಮಳೆ ಸುರಿಯುತ್ತಿದ್ದ ಕಾಲವದು. ತೋಡು ಹೊಳೆಗಳಿಗೆ ಸರಿಯಾದ ಪಾಲಗಳಿರಲಿಲ್ಲ. ಸುತ್ತ ಮುತ್ತಲ ಗ್ರಾಮಗಳ ಮಕ್ಕಳಿಗೆ ತುಂಬಿ ಹರಿಯುವ ತೋಡು ಹೊಳೆಗಳನ್ನು ದಾಟಿ ಶಾಲೆಗೆ ಹೋಗಿ ಬರುವುದೆಂದರೆ ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಹೋಗುವಷ್ಟು ತ್ರಾಸವಾಗಿರುತ್ತಿತ್ತು. ಈ ಕಷ್ಟವನ್ನು ಕಣ್ಣಾರೆ ಕಂಡು ಮರುಗಿದ ಮುತ್ತಣ್ಣನವರು 1929ರಲ್ಲಿ ತನ್ನ ಹುಟ್ಟೂರಾದ ಕೋರಂಗಾಲ ಗ್ರಾಮದಲ್ಲಿ ಹುಲ್ಲು ಚಾವಡಿ ಅಡಿಯಲ್ಲಿ ಒಂದು ಪ್ರಾಥಮಿಕ ಶಾಲೆಯನ್ನು ನಿರ್ಮಿಸಿ ಸುತ್ತ ಮುತ್ತಲಿನ ಪುಟ್ಟ ಗ್ರಾಮಗಳಿಗೆ ಅಕ್ಷರದಾನ ಮಾಡಿದರು. ಅದು ಇಂದಿನ ಪ್ರಾಥಮಿಕ ಶಾಲೆಯಾಗಿ ಮಾರ್ಪಟ್ಟಿದೆ. ಅಲ್ಲದೆ ಸಹಕಾರ ಧವಸ ಭಂಡಾರವನ್ನು ಸ್ಥಾಪಿಸಿ ಬಡಕುಟುಂಬಗಳಿಗೆ ಉಣ್ಣುವ ಅನ್ನಕ್ಕೆ ದಾರಿ ಮಾಡಿಕೊಟ್ಟ ಪುಣ್ಯಾತ್ಮರು. ತನ್ನ ಗ್ರಾಮದ ದೇವಸ್ಥಾನದ ಜೀರ್ಣೋದ್ಧಾರವನ್ನು ಸಹ ಮಾಡಿದ್ದಾರೆ.

ಯೌವ್ವನದ ಉತ್ಸಾಹಿ ತರುಣರು ಆದ ನಂಗಾರ್‌ರವರು 1932ರಿಂದ ತನ್ನ ಕಾರ್ಯ ಕ್ಷೇತ್ರವನ್ನು ಗ್ರಾಮ ಮಟ್ಟದಿಂದ ಹೋಬಳಿ ಮಟ್ಟಕ್ಕೆ ವಿಸ್ತರಿಸಿ ತನ್ನ ನಾಡಿನ ದೊಡ್ಡ ಪ್ರಮಾಣದ ಸಹಕಾರ ಸಂಘದ ಸ್ಥಾಪಕ ನಿರ್ದೇಶಕರಾಗಿ, ನಂತರ ಅಧ್ಯಕ್ಷರಾಗಿ ಹಗಲಿರುಳು ದುಡಿದ ಅವರ ಸರ್ವತೋಮುಖ ಏಳಿಗೆಗೆ ಕಾರಣಕರ್ತರಾದರು. ಅಂದು ಸ್ಥಾಪಿಸಿದ ಸಂಘ ಇಂದು 'ವ್ಯವಸಾಯ ಸೇವಾ ಸಹಕಾರ ಸಂಘ' ನಿಯಮಿತ [VSSN] ಸಂಸ್ಥೆಯಾಗಿ ಮಾರ್ಪಟ್ಟು ಪ್ರಗತಿ ಪಥದಲ್ಲಿದೆ.

1959ರಲ್ಲಿ ದೇಶದಲ್ಲಿ ಪಂಚಾಯಿತ್ತ ರಾಜ್ಯ ಸ್ಥಾಪನೆಯಾದಾಗ ತಾವ್‌ನಾಡಿನಿಂದ ಚುನಾಯಿಸಲ್ಪಟ್ಟು ಪಂಚಾಯಿತ್ತಿಯ ಪ್ರಥಮ ಅಧ್ಯಕ್ಷರಾಗಿ ಸಾಕಷ್ಟು ಸೇವೆ ಸಲ್ಲಿಸಿದರು. ಅವರ ಸೇವಾವಧಿಯಲ್ಲಿ ಪಂಚಾಯಿತ್ತಿಯಿಂದ ಗ್ರಾಮಗಳಿಗೆ ನೀರಿನ ಬಾವಿಗಳನ್ನು, ಕೃಷಿಗೆ ಕೆರೆಗಳನ್ನು ನೀರಾವರಿ ಕಟ್ಟೆಗಳನ್ನು ಸಾಕಷ್ಟು ಕಾಲು ಸೇತುವೆಗಳನ್ನು ಮತ್ತು ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಿ ನಾಡಿನ ಸರ್ವತೋಮುಖ ಅಭಿವೃದ್ಧಿಗೆ ನಾಂದಿ ಹಾಡಿದ್ದರು.

ಗ್ರಾಮಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಿದ ಅವರು ಉನ್ನತ ಮಟ್ಟದ ಕನ್ನಡ, ಇಂಗ್ಲಿಷ್ ಶಿಕ್ಷಣದಿಂದ ಮಾತ್ರವೇ ಜನತೆಯ ನೈತಿಕ ಮಟ್ಟ ಸುಧಾರಿಸುವುದೆಂದು ಮನಗಂಡು ನಾಡಿನ ಯುವ ಪೀಳಿಗೆಗೆ ಪ್ರೌಢ ಶಾಲಾ ಶಿಕ್ಷಣವನ್ನು ಒದಗಿಸುವಲ್ಲಿ ಪಣತೊಟ್ಟು ಈ ಶತಮಾನದ ಮಧ್ಯ ದಶಕದಲ್ಲಿ ಶ್ರೀ ಕಾವೇರಿ ವಿದ್ಯಾಸಂಸ್ಥೆಯ ಸ್ಥಾಪನೆಗೆ ನಾಂದಿಯಾಗಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದಲ್ಲದೆ ಅಂದು ಅವರು ಅಡಿಪಾಯ ಹಾಕಿದ ಪ್ರೌಢಶಾಲೆ ಇಂದು ಕಿರಿಯ ಕಾಲೇಜಾಗಿ ಪರಿವರ್ತನೆಗೊಂಡಿದೆ.

ದಿ|| ನಂಗಾರ್‌ರವರು ಸುಮಾರು 5 ದಶಕಗಳ ಸಾರ್ವಜನಿಕ ಸೇವಾವಧಿಯಲ್ಲಿ ಧಾರ್ಮಿಕ ಕ್ಷೇತ್ರ, ಸಹಕಾರ ರಂಗ, ಗ್ರಾಮ ಪಂಚಾಯಿತ್ತ ಮತ್ತು ವಿದ್ಯಾಕ್ಷೇತ್ರಗಳಲ್ಲಿ, ಹೋಬಳಿ ಮಟ್ಟದ ಜನಪ್ರಿಯರಾಗಿ ಜನಾಂಗದ ಧುರೀಣರಾಗಿ ಭಾಗಮಂಡಲ ನಾಡಿನ ಪೀಳಿಗೆಗೆ ಮಾರ್ಗದರ್ಶಕರಾಗಿ ನಾಡಿನ ಸರ್ವತೋಮುಖ ಅಭಿವೃದ್ಧಿಗೆ ಕಾರಣರಾಗಿದ್ದಾರೆ. ದಿವಂಗತರು ಮಾಡಿದ ಸಾರ್ವಜನಿಕ ಸೇವೆಗಳಿಗೆ ಪಂಚಾಯಿತ್ತ ಮತ್ತು ನಾಡಿನ ಜನತೆ ದಿನಾಂಕ 17–3–1982ರಲ್ಲಿ ಮಾಡಿದ ಸನ್ಮಾನ ಮತ್ತು ಗೌರವ ಪ್ರಶಸ್ತಿಗಳೇ ಸಾಕ್ಷಿಯಾಗಿದೆ. 1982ರಲ್ಲಿ ಶ್ರೀಯುತರು ನಮ್ಮನ್ನಗಲಿದರು.

ಇಂತಹ ಮಹಾಧಾನಿಗಳ ಸಮಾಜ ಸೇವಕರ ಹೆಸರನ್ನು, ಮನೆತನದ ಹೆಸರನ್ನು ಗ್ರಾಮಗಳ ಮತ್ತು ಹೋಬಳಿಯ ಪ್ರಸಿದ್ಧ ಸ್ಥಳ, ರಸ್ತೆ, ಶಾಲೆಗಳಿಗೆ ಹಾಕುವುದು ಪ್ರಯೋಜನ

[ 15ನೇ ಪುಟ ನೋಡಿ ]

# ಕೊಡಗಿನ ಯೋಧ : ಶಿಸ್ತಿನ ಸಿಪಾಯಿ ಲೆಫ್ಟಿನೆಂಟ್ ಕರ್ನಲ್ ಕುಯ್ಯಮುಡಿ ಸುಬ್ಬಯ್ಯ ಪ್ರಭಾಕರ್ (ನಿವೃತ್ತ)

ಲೇಖನ : **ಪಟ್ಟಡ ಪ್ರಭಾಕರ್**

ಲೆಫ್ಟಿನೆಂಟ್ ಕರ್ನಲ್ ಪ್ರಭಾಕರ್‌ರವರು ಕುಯ್ಯಮುಡಿ ಮನೆತನದ ಲೇಟ್ ಕ್ಯಾಪ್ಟನ್ ಸುಬ್ಬಯ್ಯ ಮತ್ತು ಶ್ರೀಮತಿ ಕಲ್ಯಾಣಿ ಇವರ ಪ್ರಥಮ ಪುತ್ರರಾಗಿ ದಿನಾಂಕ 2-6-1927ರಲ್ಲಿ ಭಾಗಮಂಡಲ ನಾಡಿನ ಸಣ್ಣಪುಲಿಕೋಟು ಗ್ರಾಮದಲ್ಲಿ ಜನಿಸಿದರು.

ಇವರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಭಾಗಮಂಡಲದಲ್ಲಿಯೂ



ಮಿಡ್ಲ್ ಸ್ಕೂಲನ್ನು ಕೊಟ್ಟೂರಿನಲ್ಲಿಯೂ ಪ್ರೌಢ ಶಾಲಾ ಶಿಕ್ಷಣವನ್ನು ಮಡಿಕೇರಿ ಮತ್ತು ಮಂಗಳೂರಿನಲ್ಲಿಯೂ, ಕಾಲೇಜು ವ್ಯಾಸಂಗವನ್ನು ಮೈಸೂರಿನ ಸೈಂಟ್ ಫಿಲೋಮಿನ ಕಾಲೇಜಿನಲ್ಲಿ ಪಡೆದರು.

ಭಾರತದ ಸೈನ್ಯದಲ್ಲಿ ಕಮಿಷನರ್ ಆಫೀಸರ್ ಆಗಲೆಂದು ಇವರ ತಂದೆ ಮತ್ತು ಸೋದರ ಮಾವನವರ ಪ್ರೇರಣೆ ಮತ್ತು ಅಭಿಲಾಷೆ ಆಗಿತ್ತು. ಇವರ ತಂದೆ ಕುಯ್ಯಮುಡಿ ಸುಬ್ಬಯ್ಯ ಮತ್ತು ಸೋದರಮಾವ ಕುದುಪಜೆ ಸುಬ್ಬಯ್ಯ ಇವರಿಬ್ಬರು ಕಮಿಷನರ್ ಆಫೀಸರು ಆಗಿದ್ದಲ್ಲದೆ ದ್ವಿತೀಯ ಮಹಾ ಯುದ್ಧದಲ್ಲಿ ಭಾಗವಹಿಸಿದ್ದ ಹಿರಿಮೆ ಇವರದು. ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಕಮಿಷನರ್ ಹುದ್ದೆಗೆ ಪ್ರಯತ್ನಪಟ್ಟು ವಿಫಲರಾಗಿ ಕೊನೆಗೆ ಗುಮಾಸ್ತರಾಗಿ ಸೇರಿ ಮುಂದಿನ ದಿನಗಳಲ್ಲಿ ಇವರಿಗೆ ಸ್ಪೆಷಲ್ ಕಮಿಷನರ್ ಆಫೀಸರ್ ಹುದ್ದೆ ಲಭಿಸಿತು.

ತನ್ನ 35 ವರ್ಷದ ದೇಶ ರಕ್ಷಣಾ ಸೇವೆಯಲ್ಲಿ ಇವರು ವಿವಿಧ ತುಕಡಿಗಳಲ್ಲಿ ಹಾಗೂ ದೇಶದ ವಿವಿಧೆಡೆ ಸೇವೆ ಸಲ್ಲಿಸಿ ಲೆಫ್ಟಿನೆಂಟ್ ಕರ್ನಲ್‌ಗೆ ಬಡ್ತಿ ಪಡೆದು ನಿವೃತ್ತಿ ಹೊಂದಿದ್ದಾರೆ. ಇವರು ಕೊಡಗು ಗೌಡ ಅರೆಭಾಷಿಕ ಜನಾಂಗದಲ್ಲಿಯೆ ಪ್ರಥಮ ಕರ್ನಲ್ ಆಗಿದ್ದಾರೆ. ಅಲ್ಲದೆ ಇವರ ತಂದೆ ದಿವಂಗತ ಕ್ಯಾ॥ ಕುಯ್ಯಮುಡಿ ಸುಬ್ಬಯ್ಯನವರು ಸಹ ನಮ್ಮ ಜನಾಂಗದಲ್ಲಿ ಎರಡನೇ ಕಮಿಷನರ್ ಅಧಿಕಾರಿಯಾಗಿದ್ದರು. ಬೆಂಗಳೂರು ಮತ್ತು ಊಟಿಯ ವೆಲ್ಲಿಂಗ್‌ಟನ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ನಮ್ಮ ಜನಾಂಗದ ಹಲವಾರು ಯುವಕರಿಗೆ ಸೇನೆಗೆ ಸೇರಲು ನೆರವಾಗಿದ್ದಾರೆ. 1962ರ ಚೈನಾ ವಾರ್ 1965, 1971ರ ಪಾಕಿಸ್ತಾನದ ಯುದ್ಧದಲ್ಲಿ ಸ್ವತಃ ವಾರ್ ಫೀಲ್ಡ್ ಏರಿಯಾದಲ್ಲಿ ಪಾಲ್ಗೊಂಡು ಕೊನೆಗೆ 1982ರಲ್ಲಿ ನಿವೃತ್ತಿಯಾದರು. ಕೊಡಗಿನಲ್ಲಿ ತನ್ನ ಪೂರ್ವಜರ ಆಸ್ತಿಯಿದ್ದರೂ ಇವರು ಬೆಂಗಳೂರಿನ ಇಂದಿರಾ ನಗರದಲ್ಲಿ ತನ್ನ ಮನೆಯಲ್ಲಿ ವಾಸವಾಗಿದ್ದಾರೆ.

ಶ್ರೀಯುತರು ಭಾಗಮಂಡಲದ ಕುದುಪಜೆ ಬಸಪ್ಪನವರ ಮಗಳನ್ನು ಮದುವೆಯಾಗಿ 1 ಗಂಡು, 3 ಹೆಣ್ಣು ಮಕ್ಕಳನ್ನು ಪಡೆದಿದ್ದಾರೆ. ಮಗ ಇಂಜಿನಿಯರಿಂಗ್ ಪದವಿಧರನಾಗಿ ತುಮಕೂರಿನ ಎಚ್. ಎಂ. ಟಿ. ಕಾರ್ಖಾನೆಯಲ್ಲಿ ಉದ್ಯೋಗಿಯಾಗಿ ಮೈಸೂರಿನ ಡಿ. ಶಿವಕುಮಾರ್‌ರವರ ಮಗಳನ್ನು ಕೈಹಿಡಿದಿದ್ದಾರೆ. [ದಂಬೆಕೋಡಿ ಸುಬ್ರಾಯರವರ ಮೊಮ್ಮಗಳು]. ಹಿರಿ ಮಗಳು ಕಲಾ ಪದವಿಧರೆಯಾಗಿ ಎಚ್.ಎಂ.ಟಿ. ಯಲ್ಲಿ ಉದ್ಯೋಗದಲ್ಲಿರುವುದಲ್ಲದೆ ಮೇಜರ್ ಮೊಟ್ಟೀರ ಸುಬ್ಬಯ್ಯನವರನ್ನು ಮದುವೆ ಆಗಿದ್ದಾರೆ. ಎರಡನೆ ಮಗಳು ಇಂಜಿನಿಯರ್ ಪದವಿಧರೆಯಾಗಿ ಕರ್ನಾಟಕ ಪವರ್ ಕಾರ್ಪೊರೇಷನ್‌ನಲ್ಲಿ ಅಸಿಸ್ಟೆಂಟ್ ಇಂಜಿನಿಯರ್ ಆಗಿ ಸೇವೆ ಸಲ್ಲಿಸುತ್ತಿದ್ದು, ಪುತ್ತೂರಿನ ಕುಡಿಪಾಡಿ ಮನೆತನದ ಮೋಹನ್‌ದಾಸ್‌ರವರನ್ನು ವಿವಾಹವಾಗಿದ್ದಾರೆ. ಕುಡಿಪಾಡಿ ಮೋಹನ್ ದಾಸ್ ಬೆಂಗಳೂರಿನ ಐ.ಟಿ.ಐ. ಕಾರ್ಖಾನೆಯಲ್ಲಿ ಮುಖ್ಯ ಇಂಜಿನಿಯರ್ ಆಗಿದ್ದಾರೆ. ಇವರ ಮೂರನೇ ಮಗಳು ಪಶುವೈದ್ಯೆಯಾಗಿ ಉತ್ತರ ಭಾರತದ ಪಂಜಾಬಿನ ವ್ಯಾಪಾರಸ್ಥನನ್ನು ಮದುವೆಯಾಗಿ ಬೆಂಗಳೂರಿನಲ್ಲಿಯೇ ನೆಲೆಸಿರುತ್ತಾರೆ.

ಕುಯ್ಯಮುಡಿ ಪ್ರಭಾಕರ್‌ರವರ ಅಮೋಘ ಸೇವೆಯನ್ನು ಪರಿಗಣಿಸಿ ಕೊಡಗು ಗೌಡ ಸಮಾಜ ಮಡಿಕೇರಿ ಇವರು ದಿನಾಂಕ 24-1-98 ರಲ್ಲಿ ಶಾಲು ಹೊದಿಸಿ ಸನ್ಮಾನಿಸಿದ್ದಾರೆ. ತನ್ನ ಸಮಸ್ತ ಸಂಸಾರದೊಂದಿಗೆ ಬೆಂಗಳೂರಿನಲ್ಲಿ ನೆಲೆಸಿರುವ ಪ್ರಭಾಕರ್‌ರವರು ನಿವೃತ್ತ ಜೀವನವನ್ನು ಜನಾಂಗದ ಹಿತ ಕಾಯುವಲ್ಲಿ ಮುಡುಪಿಟ್ಟು ಅವರ ಅಗಾಧ ಅನುಭವವು ಕಿರಿಯರಿಗೆ ಮಾರ್ಗದರ್ಶನವಾಗಲಿ ಎಂದೂ, ಇವರಿಗೆ ಜನಾಂಗದ ದೈವ ಕುಲಗುರು ಶ್ರೀ ವೆಂಕಟರಮಣನು ಸದಾ ಆಯುರಾರೋಗ್ಯ ಸಕಲೈಶ್ವರ್ಯ ಭಾಗ್ಯ ಕೊಟ್ಟು ಕಾಪಾಡಲಿ ಎಂದು ಕೊಡಗು ಸಂಗಾತಿ ಶುಭವನ್ನು ಹಾರೈಸುತ್ತದೆ. ●

# ಸಂಗಾತಿಯ ಮೂರನೇ ವರ್ಷದ ಆರಂಭ

ಕೊಡಗು ಸಂಗಾತಿ ಹುಟ್ಟಿ ಈಗ ಮೂರನೇ ವರ್ಷಕ್ಕೆ ಕಾಲಿಡುತ್ತಿದೆ ಎಂಬುದನ್ನು ಜನತೆಗೆ ತಿಳಿಸಲು ಸಂತೋಷವಾಗಿದೆ. ಹುಟ್ಟಿದ ನಂತರ ಈ ಸಂಗಾತಿಗೆ ಬಾಲಗೃಹ ದೋಷವೇನಾದರೂ ತಟ್ಟಿಯಾತೇ? ಎಂಬ ಭಯ ಜನರಲ್ಲಿ ಮೂಡಿತ್ತು. ಆದರೆ ಸಂಗಾತಿಯ ಪ್ರಯತ್ನದಿಂದ ಅಂತಹ ಪೀಡೆ ತಟ್ಟದಂತೆ ಶ್ರಮವಹಿಸಲಾಗಿ ಸುಸೂತ್ರವಾಗಿ ನಡೆದುಕೊಂಡು ಬರುತ್ತಿದೆ. ಇದಕ್ಕೆ ಮಹಾಜನರ ಸಹಕಾರವೂ ಕಾರಣವೆಂದು ಹೇಳಬಹುದು.

ಪತ್ರಿಕೋದ್ಯಮ ಹಾಗೂ ಸಾಹಿತ್ಯ ಒಂದಕ್ಕೊಂದರ ನಂಟು. ಪತ್ರಿಕೋದ್ಯಮ ಹಣಗಳಿಸುವ ಉದ್ಯಮವಲ್ಲ. ಅದರಲ್ಲೂ ಸಂಗಾತಿಯಂತಹ ಒಂದು ಗುಂಪಿನ ಹಾಗೂ ಒಂದು ಚಿಕ್ಕ ಪ್ರದೇಶದೊಳಗಿನ ಚಲಾವಣೆಯಲ್ಲಿರುವ ಪತ್ರಿಕೆ. ಆ ಗುಂಪಿನ ಹಾಗೂ ಪ್ರದೇಶದ ಜನರ ಪ್ರೋತ್ಸಾಹದ ಮೇಲೆಯೇ

**ಪ್ರೊ॥ ಪೂಜಾರಿ ಮೊಣ್ಣಪ್ಪ, ಬೆಂಗಳೂರು**

ನಿಂತಿದೆ. ಸಾಧಾರಣ 50,000 ಜನಸಂಖ್ಯೆ ಗಿಂತ ಹೆಚ್ಚು ಇರುವ ಕೊಡಗಿನ ಗೌಡರಲ್ಲಿ ಬರೇ 1800 ಪ್ರತಿಗಳು ಚಲಾವಣೆಯಲ್ಲಿವೆ ಎಂದರೆ ಸಂಗಾತಿಯ ಪ್ರಗತಿ ಅಷ್ಟೊಂದು ಪ್ರೋತ್ಸಾಹಕವಾಗಿದೆ ಎಂದು ಹೇಳಲು ಸಾಧ್ಯವಿಲ್ಲ. ಸಂಗಾತಿಯ ಕೆಲವರು ಮೆಚ್ಚುಗೆಯ ಮಾತನಾಡಿದರೂ ಆ ಮೆಚ್ಚುಗೆಯ ಮಾತು ಪ್ರತಿಯೊಬ್ಬ ಸದಸ್ಯರ ಅಭಿಪ್ರಾಯವೆಂದು ಪರಿಗಣಿಸಲು ಸಾಧ್ಯವಿಲ್ಲ. ಕಾರಣವೇನೆಂದರೆ 1800 ಸಂಖ್ಯೆಯ ಚಂದದಾರರ ಹೆಸರು ಸಂಗಾತಿಯ ದಾಖಲೆಯಲ್ಲಿದ್ದರೂ 1200 ಮಾತ್ರ ತಮ್ಮ ಚಂದಾವನ್ನು ಕಳುಹಿಸುತ್ತಿದ್ದಾರೆ 600ರಷ್ಟು ಚಂದದಾರರಿಗೆ ಸಂಗಾತಿಯು ಆಗಾಗ್ಗೆ ಎಚ್ಚರಿಸುತ್ತಿದ್ದರೂ ಏನು ಪ್ರಯೋಜನವಿಲ್ಲದಂತಾಗಿ ಸಂಗಾತಿಯು ಕಂಗೆಟ್ಟು ಕೂರುವ ಸನ್ನಿವೇಶ ಉಂಟಾಗಿದೆ. ಇದನ್ನು ಜನಾಂಗದ ಪ್ರತಿಯೊಬ್ಬರೂ ತಿಳಿದರೆ ಮಾತ್ರ ಮುಂದಿನ ಪ್ರಗತಿ ಸಾಧ್ಯವಾದೀತು.

ಕೊಡಗು ಸಂಗಾತಿ ಯುವ ಬರಹಗಾರರಿಗೆ ತಮ್ಮ ಸಾಹಿತ್ಯ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಗೌಡರ ಸಂಸ್ಕೃತಿ, ಇತಿಹಾಸ ಮಹಾನ್ ವ್ಯಕ್ತಿಗಳ ಪರಿಚಯ ಮಾಡಿಕೊಡಲು ಹಾಗೂ ಜನಾಂಗದವರಲ್ಲಿ ಸಾರ್ವಜನಿಕ ಕಾರ್ಯ ಕ್ರಮಗಳನ್ನು ತಿಳಿಸುವ ವರ್ತಮಾನ ಪತ್ರಿಕೆಯಾಗಿ ಕಳೆದ ಎರಡು ವರ್ಷಗಳಲ್ಲಿ ತನ್ನ ಕೈಲಾದ ಪ್ರಯತ್ನವನ್ನು ಮಾಡಿದೆ. ಕೊಡಗು ಸಂಗಾತಿ ಹುಟ್ಟುವುದಕ್ಕೆ ಮೊದಲು ಇವುಗಳನ್ನು ತಿಳಿಸುವ ಮಾಧ್ಯಮವೇ ಇಲ್ಲದಾಗಿ ಜನಾಂಗದ ಜನರಿಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸಾಧ್ಯವಿತ್ತಿಲ್ಲ. ಒಂದು ದೇಶದ ಯಾ ಜನಾಂಗದ ಚರಿತ್ರೆಯನ್ನು ಓದಿದರೆ ತಿಳಿಯುತ್ತದೆಂದು ತಿಳಿದವರು ಹೇಳುತ್ತಾರೆ. ನೆನ್ನೆಯ ಆಗು ಹೋಗುಗಳು ಇಂದಿನ ಚರಿತ್ರೆಯಾಗುತ್ತದೆ. ಇಂದಿನ ಆಗು ಹೋಗುಗಳು ನಾಳೆಗೆ ಚರಿತ್ರೆಯಾಗುತ್ತದೆ ಚರಿತ್ರೆಯಲ್ಲಿ ಒಳ್ಳೆಯ ಸಂಗತಿಗಳೂ, ಕೆಟ್ಟ ಸಂಗತಿಗಳೂ ಇರುತ್ತವೆ. ಕೆಟ್ಟ ಸಂಗತಿಯ ಕಹಿಯನ್ನುಂಡು ಮುಂದಿನ ದಿನಗಳಲ್ಲಿ ಅಂತಹ ಸಂಗತಿಗಳು ಮರುಕಳಿಸದಂತೆ ಜನ ಜಾಗೃತರಾಗುತ್ತಾರೆ. ಅದೇ ರೀತಿ ನಮ್ಮ ಜನಾಂಗದಲ್ಲಿ ಈ ಹಿಂದೆ ಆಗಿ ಹೋದದೆಷ್ಟೊ ವಿಷಯಗಳು ಮರುಕಳಿಸದಂತೆ ಜಾಗೃತಿ ವಹಿಸಲು ಸಂಗಾತಿಯಂತಹ ಪತ್ರಿಕೆಯ ಮುಖಾಂತರ ಮಾರ್ಗದರ್ಶನ ನೀಡಲು ಸಾಧ್ಯವಾಗುತ್ತದೆ. ಈ ರೀತಿ ಸಾಧ್ಯವಾಗುವುದಕ್ಕೆ ಜನತೆಯ ಪ್ರೋತ್ಸಾಹ ಅತ್ಯಾವಶ್ಯಕ.

ಸಂಗಾತಿ ಈ ಎರಡು ವರ್ಷಗಳಲ್ಲಿ ಹಲವಾರು ಮಹಾನ್ ವ್ಯಕ್ತಿಗಳ ಪರಿಚಯ ಮಾಡಿಕೊಟ್ಟಿದೆ. ಗೌಡರ ಸಂಸ್ಕೃತಿ, ಅರೆ ಭಾಷೆಯ ಲೇಖನ, ಕವಿತೆಗಳನ್ನು ಯುವಕರು/ಯುವತಿಯರು ಬರೆಯುವುದಕ್ಕೆ, ಕಥೆ-ಲೇಖನಗಳನ್ನು ಬರೆಯುವುದಕ್ಕೂ ಅವಕಾಶ ಮಾಡಿಕೊಟ್ಟು, ಮೂಲೆ ಮೂಲೆಗಳಲ್ಲಿ ನಡೆದ ಸಭೆಗಳ ಕಾರ್ಯ ಕ್ರಮಗಳ ವರದಿಯನ್ನು ಜನತೆಗೆ ತಿಳಿಯುವಂತೆ ಮಾಡಿದೆ

ಇದೇ ರೀತಿ ಇನ್ನು ಮುಂದಕ್ಕೂ ಹೆಚ್ಚು ಸಂಖ್ಯೆಯ ಚಂದದಾರರಿಂದ ಹೆಚ್ಚಾದ ಲೇಖನ, ಕವಿತೆ, ಕತೆಗಳು ಪ್ರಕಟಗೊಳ್ಳಲು ಸಾಧ್ಯವಾಯಿತು. ಒಬ್ಬ ಯುವತಿ ಯಾ ಯುವಕ ತನ್ನ ಲೇಖನ, ಕಥೆ ಯಾ ಕವನವನ್ನು ಬೇರೆ ಪತ್ರಿಕೆಗಳಿಗೆ ಕಳುಹಿಸಿದಾಗ ಅವು ಪ್ರಕಟಗೊಳ್ಳುತ್ತವೋ ಇಲ್ಲವೋ ಎಂಬ ಸಂಶಯದಿಂದಲೇ ಕಳುಹಿಸಬೇಕಾಗುತ್ತದೆ. ಆದರೆ ಇಲ್ಲಿ ಎಲ್ಲಾ ಬರವಣಿಗೆಗಳನ್ನು ಪ್ರಕಟಿಸಲು ಸಾಧ್ಯವಾಗದಿದ್ದರೂ ಪ್ರಕಟಣೆಗೊಳ್ಳಲು ಅರ್ಹವಾದವುಗಳನ್ನು ಪ್ರಕಟಿಸಲಾಗುತ್ತಿದೆ. ಇದರಿಂದಾಗಿ ಯುವಕ/ಯುವತಿಯರಿಗೆ ಬರೆಯುವ ಹವ್ಯಾಸ ಹೆಚ್ಚಾಗಿ ಸಾಹಿತ್ಯದಲ್ಲಿ ಆಸಕ್ತಿ ಉಂಟಾಗಿ ಸಮಾಜದಲ್ಲಿ ಸಾಹಿತ್ಯಕ್ಕೆ ಉತ್ತೇಜನವಾಗುತ್ತಿದೆ. ಅಲ್ಲದೆ ಹೆಚ್ಚಿನ ಜನರಿಗೆ ಅರಿವಿಲ್ಲದೆ ಜನಾಂಗದ ಚರಿತ್ರೆಯೂ ಸಹ ತಿಳಿಯಪಡಿಸುವಂತಾಗುತ್ತದೆ. ಆದ್ದರಿಂದ ಸಂಗಾತಿಯು ಮಹಾಜನರ ಪ್ರೋತ್ಸಾಹ ಸಹಕಾರದಿಂದ ತನ್ನ ಪ್ರಗತಿಯತ್ತ ನಡೆಯಲು ಸಾಧ್ಯವಾದೀತೆ ?

# ಆರೋಗ್ಯ ಚಿಂತನ:

## ಚರ್ಮದ ಸಂರಕ್ಷಣೆ :

ಚರ್ಮ ಒಂದು ಅತಿ ಅಮೂಲ್ಯವಾದ ಅಂಗ. ಚರ್ಮ ಒಳ ಅಂಗಾಂಗಗಳಿಗೆ ಹೊದಿಕೆಯಾಗಿರುವುದಲ್ಲದೆ, ದೇಹದ ಉಷ್ಣತೆಯ ಸಮಾನತೆಯನ್ನು ಕಾಪಾಡುತ್ತದೆ. ದೇಹದ ಕೊಳೆಯನ್ನು ಹೊರಹಾಕುವಲ್ಲಿ ಚರ್ಮದ ಪಾತ್ರ ದೊಡ್ಡದು. ಮನುಷ್ಯ ತನ್ನ ನೋವು, ಒತ್ತಡ, ಸ್ಪರ್ಶ, ಕೋಪ, ಸಂತೋಷ ಮತ್ತು ಮನಸ್ಸಿನ ಇತರ ಸ್ಥಿತಿಯನ್ನು ಚರ್ಮದ ಮೂಲಕ ಪ್ರಕಟಪಡಿಸುತ್ತಾನೆ. ಬಾಹ್ಯ ಸೌಂದರ್ಯಕ್ಕೆ ಪ್ರಾಮುಖ್ಯತೆಯಿರುವ ಇಂದಿನ ಯುಗದಲ್ಲಿ ಚರ್ಮದ ಪ್ರಾಮುಖ್ಯತೆ ಬಹಳವಾದದ್ದು !

ಮುಖದ ಚರ್ಮದ ಪ್ರಾಮುಖ್ಯತೆಯನ್ನಂತೂ ವರ್ಣಿಸಲು ಅಸಾಧ್ಯ. ಅದನ್ನು ಕಾಪಾಡುವುದಕ್ಕೋಸ್ಕರ ಮಧ್ಯ ವಯಸ್ಸಿನ ಮಹಿಳೆಯರು ಪಡುವ ಪಾಡು ಅಷ್ಟಿಷ್ಟಲ್ಲ. ತಮ್ಮ

ಡಾ|| ಎನ್. ಎಸ್. ಪ್ರವೀಣ. ಎಂ.ಡಿ., ಕೇರಳ

ಸೌಂದರ್ಯ ಹೆಚ್ಚಿಸಲು ಅನೇಕ ಕಂಪೆನಿಯವರ ಜಾಹಿರಾತುಗಳಿಗೆ ಮೊರೆ ಹೋಗಿ ನಾನಾ ರೀತಿಯ ಕ್ರೀಮ್, ಪೌಡರ್ ಹಚ್ಚುತ್ತಾರೆ. ಎಷ್ಟೊ ಹಣ ವ್ಯಯ ಮಾಡಲು ಸಿದ್ಧವಾಗಿರುತ್ತಾರೆ.

ಚರ್ಮದ ಬಣ್ಣ ಮತ್ತು ಇತರ ಸೌಂದರ್ಯ ಗುಣಗಳು ಅನುವಂಶಿಕವಾಗಿ ಮೊದಲೇ ನಿರ್ಧರಿಸಲ್ಪಟ್ಟಿರುತ್ತದೆ. ಚರ್ಮದ ಸೌಂದರ್ಯ ಇಡೀ ದೇಹದ ಸ್ವಾಭಾವಿಕ ಆರೋಗ್ಯವನ್ನು ಅವಲಂಭಿಸಿರುತ್ತದೆ. ಕೃತಕ ಸಾಧನಗಳಿಂದ ಇದರ ಬದಲಾವಣೆ ಅಸಾಧ್ಯ. ಮಹಿಳೆಯರು ತಮ್ಮ ಸೌಂದರ್ಯವರ್ಧನೆಗೆ ಜಾಹಿರಾತು ಮತ್ತು ನಕಲಿ ಔಷಧಗಳ ಮೊರೆ ಹೋಗುವುದರಿಂದ ಯಾವುದೇ ಪ್ರಯೋಜನವಿಲ್ಲ. ಅಂಥ ವಿಶೇಷ ಗುಣಗಳೇನೂ ಈ ಔಷಧಗಳಲ್ಲಿರುವುದಿಲ್ಲ.

### ಮೊಡವೆ :

ಯುವ ಜನರನ್ನು ಕಾಡುವ ಸಮಸ್ಯೆಗಳಲ್ಲಿ ಪ್ರಮುಖವಾದದ್ದು ಮೊಡವೆಗಳು. ಮುಖದ ಸೌಂದರ್ಯವನ್ನು ಕೆಡಿಸುವ ಇದು ಹದಿಹರೆಯದ ವಯಸ್ಕರನ್ನು ತೀವ್ರ ಚಿಂತಾಜನಕರನ್ನಾಗಿ ಮಾಡುತ್ತದೆ. ಮೊಡವೆಯಿರುವವರು ದಿನಕ್ಕೆ 3–4 ಬಾರಿ ಸ್ವಚ್ಛವಾದ ನೀರಿನಿಂದ ಸೋಪುಹಾಕಿ ಮುಖ ತೊಳೆದುಕೊಳ್ಳಬೇಕು. ಎಣ್ಣೆ ಪದಾರ್ಥಗಳನ್ನು ಕಡಿಮೆ ಸೇವಿಸಬೇಕು. ಹಿಚುಕಬಾರದು ಮತ್ತು ಸೂಜಿಯಿಂದ ಚುಚ್ಚಬಾರದು. ಚರ್ಮವನ್ನು ಸ್ವಚ್ಛವಾಗಿ ಇಟ್ಟುಕೊಂಡು ಯಾವ ಕೃತಕ ಶೃಂಗಾರ ಸಾಧನಗಳನ್ನೂ ಉಪಯೋಗಿಸದೆ ಇದ್ದರೆ ಮೊಡವೆಗಳನ್ನು ಸುಲಭವಾಗಿ ನಿಯಂತ್ರಿಸಬಹುದು. ಆದರೂ ಇವು ತೀವ್ರ ಸ್ವರೂಪದಲ್ಲಿ ಇದ್ದಲ್ಲಿ ಚರ್ಮ ವೈದ್ಯರನ್ನು ಕಂಡು ಅವರ ಸಲಹೆಯಂತೆ ಔಷಧಗಳನ್ನು ಬಳಸಬಹುದು.

### ಮುಖದ ಬಣ್ಣ :

ಮುಖದ ಬಣ್ಣ ಕಪ್ಪಾಗಿದೆಯೆಂದು ಹಲವು ಮಹಿಳೆಯರು ಕೊರಗುವುದುಂಟು. ಇದು ಅನುವಂಶಿಕವಾಗಿ ನಿರ್ಧರಿಸಲ್ಪಟ್ಟಿರುವುದರಿಂದ ಇದಕ್ಕೆ ಯಾವುದೇ ಔಷಧಿ ಪ್ರಯೋಜನಕಾರಿಯಾಗಲಾರದು. ಮಾರ್ಕೆಟ್‌ನಲ್ಲಿ ಸಿಗುವ ಬ್ಲೀಚಿಂಗ್ ಔಷಧಿಗಳು ಚರ್ಮವನ್ನು ಕೃತಕವಾಗಿ ಸ್ವಲ್ಪ ಸಮಯದವರೆಗೆ ಮಾತ್ರ ಬಿಳಿ ಮಾಡಬಲ್ಲವಷ್ಟೆ. ಹಾಗೆಯೇ ಚರ್ಮಕ್ಕೆ ಬಣ್ಣ ಹಚ್ಚಿಕೊಳ್ಳುವುದುಂಟು. ಇದರಿಂದ ಮುಖದ ಚರ್ಮಕ್ಕೆ ಹಾನಿಯಿದ್ದು ಚರ್ಮ ತನ್ನ ನೈಜತೆ ಮತ್ತು ಕಾಂತಿಯನ್ನು ಕಳೆದುಕೊಳ್ಳುತ್ತದೆ.

### ಕೂದಲು ಉದುರುವಿಕೆ :

ಕೂದಲು ಉದುರುವಿಕೆ ಬಹಳಷ್ಟು ಮಹಿಳೆಯರ ದೈನಂದಿನ ಸಮಸ್ಯೆ. ಯಾವ ಕೃತಕ ಔಷಧಿಗಳು ಕೂದಲನ್ನು ಬೆಳೆಸಲು ಸಹಕಾರಿಯಾಗುವುದಿಲ್ಲ. ಕೂದಲು ಬೆಳೆಯುವ ಸಂದರ್ಭದಲ್ಲಿ ಹಳೆ ಕೂದಲು ಉದುರುತ್ತಾ ಇರುತ್ತದೆ. ಹೊಸ ಕೂದಲು ಕೆಲ ಕಾಲದ ಮೇಲೆ ಬೆಳೆಯುತ್ತದೆ. ಇದನ್ನು ಅರಿಯದ ಮಹಿಳೆಯರು ಅನವಶ್ಯಕವಾಗಿ ಬಹಳ ಚಿಂತೆಗೀಡಾಗುತ್ತಾರೆ. ಕೆಲವೊಮ್ಮೆ ತಲೆಹೊಟ್ಟು' [Dandruf] ಇದ್ದಲ್ಲಿ ಅತಿಯಾಗಿ ಕೂದಲು ಉದುರಬಹುದು. ಇದನ್ನು ನಿವಾರಿಸಲು ಶ್ಯಾಂಪು ಬಳಸಬೇಕು. ಶೆಲ್‌ಶನ್ [Selsan] ಶ್ಯಾಂಪು ಇತ್ಯಾದಿ ಬಹಳ ಪರಿಣಾಮಕಾರಿಯಾಗಿದೆ. ತಲೆಯ ಭಾಗದಲ್ಲಿ ಫಂಗಸ್ [Fungal Infection] ಸೋಂಕು ಇದ್ದಲ್ಲಿ ಸಹ ಕೂದಲು ಉದುರಬಹುದು. ಇದಕ್ಕೆ ವೈದ್ಯರ ಸಲಹೆಯಂತೆ ಔಷಧ ಬಳಸಬೇಕು. ಸ್ನಾನಕ್ಕೆ ಬಳಸುವ ನೀರಿನಲ್ಲಿ ರಸಾಯನಿಕ ವಸ್ತುಗಳ ಮಾಲಿನ್ಯದಿಂದ ಸಹ ಕೂದಲು ಉದುರಬಹುದು. ಕೆಲವೊಂದು ಬಗೆಯ ಔಷಧಗಳ ಬಳಕೆಯಿಂದ ಸಹ ಕೂದಲು ಉದುರಬಹುದು. ಅಂತಹ ಸಂದರ್ಭದಲ್ಲಿ ಆ ಔಷಧಗಳ ಬಳಕೆಯನ್ನು ನಿಲ್ಲಿಸಬೇಕಾಗುತ್ತದೆ. ತಲೆ ಸ್ನಾನ ಮಾಡಿದ

ಮೇಲೆ ತಲೆಯನ್ನು ಅತೀ ರಭಸದಿಂದ ಒರೆಸಿಕೊಳ್ಳುವುದು ಬೇಡ.

**ಪರಿಸರದ ಪರಿಣಾಮ :**

ಮಲಿನವಾದ ಪರಿಸರದಲ್ಲಿ ಇರುವ ಹಾನಿಕಾರಕ ರಾಸಾಯನಿಕ ವಸ್ತುಗಳು ಚರ್ಮದ ಮೇಲೆ ಪ್ರಭಾವ ಬೀರಿ ಚರ್ಮವು ಸುಕ್ಕಾಗಿ ಕಾಂತಿಯನ್ನು ಕಳೆದುಕೊಳ್ಳುತ್ತದೆ.

ಅತಿಯಾದ ಬಿಸಿಲಿನಲ್ಲಿ ಮತ್ತು ಧೂಳು ತುಂಬಿರುವ ವಾತಾವರಣದಲ್ಲಿರುವುದರಿಂದ ಚರ್ಮದ ಮೇಲೆ ತೊಂದರೆಯಾಗುವ ಸಾಧ್ಯತೆಗಳಿವೆ. ಚರ್ಮವು ಕಪ್ಪಾಗುವುದಲ್ಲದೆ ಸುಕ್ಕಾಗಿ ಒರಟಾಗಬಹುದು. ಅತಿಯಾದ ಬಿಸಿಲಿನಿಂದ ಮುಖ ಚರ್ಮವನ್ನು ರಕ್ಷಿಸಿಕೊಳ್ಳಲು ಕ್ಯಾಲಾಡ್ರಿಲ್ [Caladryl Lotion], ಪಾಬಾಲಾಕ್ [Pabalak], ಮೆಲಾಲೈಟ್ [Melalite cream] ಇತ್ಯಾದಿ [Sunscreen] ಔಷಧಗಳನ್ನು ಬಳಸಬಹುದು.

**ಚಿಂತೆ ಬೇಡ :**

ಪ್ರತಿಯೊಬ್ಬರ ಚರ್ಮವು ಸೌಂದರ್ಯಯುತವಾಗಿಯೇ ಇರುತ್ತದೆ. ಈ ನೈಸರ್ಗಿಕ ಸೌಂದರ್ಯವನ್ನು ಕಾಪಾಡಬೇಕೆ ಹೊರತು ಬದಲಾವಣೆ ಸಾಧ್ಯವಿಲ್ಲ ಮತ್ತು ಅನಗತ್ಯ. ನಡವಳಿಕೆ ಮತ್ತು ವ್ಯಕ್ತಿತ್ವದಿಂದ ಸ್ವಾಭಾವಿಕ ಸೌಂದರ್ಯವನ್ನು ವೃದ್ಧಿಗೊಳಿಸಬೇಕೆ ವಿನಹ ಕೃತಕ ಶೃಂಗಾರ ಸಾಧನಗಳಿಂದ ಅಲ್ಲ. ಏಕೆಂದರೆ, ಈ ಕೃತಕ ಸಾಧನಗಳು ಚರ್ಮದ ಸೌಂದರ್ಯವನ್ನು ಹಾಳು ಮಾಡುವುದೂ ಉಂಟು.

ಪ್ರತಿಯೊಬ್ಬರು ದೇಹವನ್ನು ಶುಚಿಯಾಗಿಟ್ಟುಕೊಳ್ಳುವುದರಿಂದ, ಪೌಷ್ಟಿಕವಾದ ಸಮತೋಲನ ಆಹಾರ ಸೇವನೆಯಿಂದ [ಹಸಿರು ಸೊಪ್ಪು, ತರಕಾರಿ, ತಾಜಾ ಹಣ್ಣುಗಳನ್ನು ಯಥೇಚ್ಛವಾಗಿ ಸೇವಿಸಬೇಕು], ವ್ಯಾಯಾಮದಿಂದ ಚರ್ಮದ ಆರೋಗ್ಯ ಕಾಪಾಡಿಕೊಳ್ಳಬಹುದೇ ಹೊರತು ಕೃತಕ ಶೃಂಗಾರ ಸಾಧನಗಳಿಂದ ಅಲ್ಲ ಎಂಬ ಅಂಶವನ್ನು ಅರಿಯಬೇಕು. ಮನಸ್ಸಿನ ಚಿಂತೆಯನ್ನು ಹೊರದೊಡಿಸಿ ಯಾವಾಗಲೂ ನೆಮ್ಮದಿಯಿಂದ ನಗುನಗುತ್ತಾ ಇರಬೇಕು. ಚಿಂತೆಯಿದ್ದಲ್ಲಿ ಅದು ಇನ್ನು ಹತ್ತು ಹಲವು ರೋಗಗಳಿಗೆ ಆಹ್ವಾನವಿತ್ತಂತೆ ! ●

## ಗೌಡರ ವಿವಾಹ ಪದ್ಧತಿಗಳ ಅವಲೋಕನ

[ಕಳೆದ ಸಂಚಿಕೆಯಿಂದ]

ಗೌಡರು ಸಾಮಾನ್ಯವಾಗಿ ವ್ಯವಸಾಯಗಾರರಾದುದರಿಂದ ಅವರು ಸಾಮಾನ್ಯವಾಗೆಲ್ಲ ಮಾರ್ಚ್–ಏಪ್ರಿಲ್–ಮೇ–ಜೂನ್ ತಿಂಗಳುಗಳಲ್ಲಿ ಮದುವೆಯನ್ನು ಏರ್ಪಡಿಸುತ್ತಾರೆ ಬೇಸಿಗೆ ಕಾಲದಲ್ಲಿ ಮದುವೆಯಾದ ಮದುಮಗಳು ತನ್ನ ಗಂಡನ ಮನೆಯಲ್ಲಿ ವ್ಯವಸಾಯ ಕೆಲಸಗಳಿಗೆ ಗಂಡನೊಡನೆ, ನಾದಿನಿಯರೊಡನೆ, ಭಾವ ಮೈದುನರೂ ಸಹ ಹೊಸ ಮದುಮಗಳ ಗುಣಧರ್ಮವನ್ನು ಅರಿತುಕೊಳ್ಳುತ್ತಾರೆ ಈ ರೀತಿ ಹೊಂದಿಕೊಂಡು ಕೆಲಸ ಕಾರ್ಯಗಳನ್ನು ಮಾಡುವ ದಿನಗಳಲ್ಲಿ ಆಟಿ ತಿಂಗಳು ಬರುವುದರಿಂದ ಆ ತಿಂಗಳೆಲ್ಲಾ ಹೊಸದಾಗಿ ಮದುವೆಯಾದ ಮದುವಣಗಿತ್ತಿಯು ತನ್ನ ತವರು ಮನೆಗೆ ಹೋಗುವ ಪರಿಸ್ಥಿತಿ ಬರುವುದರಿಂದ, ಗಂಡನ ಮನೆಯವರೆಲ್ಲರೂ ಹೊಸದಾಗಿ ಬಂದ ಮದುವಣಗಿತ್ತಿಯ ವಿಷಯ ಯೋಚಿಸುತ್ತಾ ಕಾಲ ಕಳೆಯುವ ಸಂದರ್ಭ ಬರುವುದರಿಂದ, ಅವಳ ವಿರಹ ಗಂಡನಲ್ಲಿಯೂ, ಅಗಲಿಕೆಯು ಗಂಡನ ಮನೆಯವರೆಲ್ಲರಿಗೂ ನಿರ್ಮಲವಾದ ಪ್ರೀತ್ಯಾದರಗಳಿಗೆ ದಾರಿಮಾಡಿಕೊಡುತ್ತದೆ.

**ಸಂಪ್ರದಾಯಗಳ ಅವಶ್ಯಕತೆ**

**ಕೊಡಗು ಮತ್ತು ದ. ಕ. ಜಿಲ್ಲೆಯ ಗೌಡರಲ್ಲಿ ವರದಕ್ಷಿಣೆ ಪಿಡುಗು ಅತ್ಯಂತ ವಿರಳವೆನ್ನಬಹುದು. ಇತರ ಕಡೆಗಳಲ್ಲಿ ಹೆಣ್ಣು ಹೆತ್ತ ತಂದೆ ತಾಯಿಗಳನ್ನು ಪೀಡಿಸುತ್ತಿರುವ ಈ ವರದಕ್ಷಿಣೆಯ ಪೆಡಂಭೂತವು ನಮ್ಮ ಸಮಾಜದಲ್ಲಿ ಕಡಿಮೆ ಇರುವುದು ಹಿಂದೂ ಸಂಸ್ಕೃತಿಯಲ್ಲಿ ಅಡಕವಾಗಿರುವ ವೈಶಿಷ್ಟವನ್ನು ಇಂದಿಗೂ ಕಾಪಾಡಿಕೊಂಡು ಬಂದಿರುವುದಕ್ಕೆ ಸಾಕ್ಷ್ಯವಾಗಿದೆ.** ತಂದೆ–ತಾಯಿಗಳು ತಾವಾಗಿಯೇ ತಮ್ಮ ಮಗಳ ಕ್ಷೇಮದ ದೃಷ್ಟಿಯಿಂದ ಆಸ್ತಿ, ಹಣ–ಒಡವೆಗಳನ್ನು ಬಳುವಳಿಯಾಗಿ ಕೊಟ್ಟರೆ ಅದು ವರದಕ್ಷಿಣೆ ಆಗದು. ಪುರಾತನ ಕಾಲದಿಂದಲೂ ಸ್ತ್ರೀಧನದ ವ್ಯವಸ್ಥೆ ಹಿಂದೂ ಸಮಾಜದಲ್ಲಿ ರೂಢಿಯಲ್ಲಿತ್ತು. ಅರೆಭಾಷಿಕ ಗೌಡರ ಹೊರಗಿನ ಸಮಾಜಗಳಲ್ಲಿ ಕಾಣಬರುವ ವರದಕ್ಷಿಣೆಯ ಭೂತಕ್ಕೆ ನಮ್ಮ ಸಮಾಜದ ಯುವಕರು ಬಲಿ ಆಗದೇ ಹೋದರೆ ನಮ್ಮ ಸಮಾಜದ ಜೀವನದಲ್ಲಿ ಈಗಿರುವ ಶಾಂತಿ, ಸಮಾಧಾನ ಮುಂದುವರಿದುಕೊಂಡು ಹೋಗಬಹುದು.

ಅರೆಭಾಷಿಕ ಗೌಡರ ವಿವಾಹಗಳಲ್ಲಿ ವರದಕ್ಷಿಣೆ ಪಿಡುಗು ಹರಡಿರುವುದಕ್ಕೆ ಕಾರಣಗಳೂ ಇವೆ.

1. ಇವರಲ್ಲಿ ಶೇ. 98ರಷ್ಟು ಜನರು ಸಣ್ಣ ಹಿಡುವಳಿದಾರ ರೈತರು. ಇವರುಗಳು ತಮ್ಮ ಸ್ಥಿತಿಗತಿಗನುಗುಣವಾಗಿ ಸಂಬಂಧವನ್ನು ಬೆಳೆಸುತ್ತಾರೆ. ಆಗ ಉಭಯ ಕಡೆಯವರು

ಆರ್ಥಿಕ ಸ್ಥಿತಿಯನ್ನು ಅನುಸರಿಸಿ ವಿವಾಹ ಖರ್ಚನ್ನು ಮಾಡುವರು.

2. ಬಹುತೇಕ ಮಂದಿ ಹೆಣ್ಣಿನ ಕಡೆಯಿಂದ ಹಣವನ್ನು ಇಚ್ಛಿಸುವುದಿಲ್ಲ. ಇದಕ್ಕೆ ಕಾರಣ, ಬೇರೆಯವರಿಂದ ಹಣ ತೆಗೆದುಕೊಳ್ಳುವುದು ತಮ್ಮ ಅಂತಸ್ತಿಗೆ ಹಾಗೂ ಮನೆತನದ ಗೌರವಕ್ಕೆ ಕೊರತೆ ಎಂಬ ಭಾವನೆ ಇವರಲ್ಲಿ ಇದೆ.

3. ಅರೆಭಾಷಿಕ ಗೌಡರು ತಮ್ಮ ಹೆಣ್ಣು ಮಕ್ಕಳಿಗೆ ಗಂಡು ಮಕ್ಕಳಂತೆ ಸರಿ ಸಮಾನವಾದ ವಿದ್ಯಾಭ್ಯಾಸ ಕೊಡಿಸುತ್ತಿರುವುದರಿಂದ ವಿದ್ಯಾವಂತ ಯುವತಿಯರು ಉದ್ಯೋಗಕ್ಕೆ ಸೇರಿ ತಮ್ಮ ಜೀವನವನ್ನು ತಮ್ಮದೇ ಸಂಪಾದನೆಯಿಂದ ಸಾಗಿಸಿಕೊಂಡು ಹೋಗಬೇಕೆಂಬ ಭಾವನೆಯನ್ನು ಬೆಳೆಸಿಕೊಂಡು ಸಮಾಜದಲ್ಲಿ ತಮಗೂ ಸರಿಸಮಾನವಾದ ಅಧಿಕಾರ ಇದೆ ಎಂಬುದನ್ನು ಮನಗಂಡಿರುವುದರಿಂದ ಹಾಗೂ ವಿದ್ಯಾವಂತ ಯುವಕ, ವಿದ್ಯಾವಂತೆ ಯುವತಿಯನ್ನು ವಿವಾಹವಾದರೆ ದಿನದಿಂದ ದಿನಕ್ಕೆ ಉಲ್ಬಣಗೊಳ್ಳುತ್ತಿರುವ ವಸ್ತುಗಳ ಬೆಲೆ ಏರಿಕೆಯ ದುಸ್ತರದಿಂದ ಖರ್ಚನ್ನು ಸರಿದೂಗಿಸಲು, ಉದ್ಯೋಗಸ್ಥ ಯುವತಿಯನ್ನು ವಿವಾಹವಾದರೆ ಬಾಳು ಸುಗಮಗೊಳ್ಳಬಹುದೆಂಬ ಭಾವನೆಯಿಂದ ವರದಕ್ಷಿಣೆಯ ಗೊಡವೆಗೇ ಹೋಗುವುದಿಲ್ಲ. ಯಾರು ಹೆಣ್ಣು ಮಕ್ಕಳಿಗೆ ವಿದ್ಯೆ ನೀಡದೆ ಮನೆಯಲ್ಲಿಟ್ಟುಕೊಂಡು ವಿವಾಹ ಮಾಡಿ ತಮ್ಮ ಭಾಗದ ಕೆಲಸ ಮುಗಿಯಿತೆಂದು ಭಾವಿಸಿದ್ದಾರೋ ಅಂತಹವರಲ್ಲಿಯೇ ವರದಕ್ಷಿಣೆಯ ಪಿಡುಗು ಹೆಚ್ಚಾಗಿರುವುದು ಕಂಡುಬರುತ್ತದೆ. 'ಕಟ್ಟಿಕೊಟ್ಟ ಬುತ್ತಿಗಿಂತ' ಶ್ರಮಪಟ್ಟು ದುಡಿಯುವ ಪ್ರವೃತ್ತಿಯು ಜನರಲ್ಲಿ ವರದಕ್ಷಿಣೆಯ ಪಿಡುಗು ಅತೀ ಕಡಿಮೆ ಇರುವುದರಿಂದ ಅರೆಭಾಷೆ ಗೌಡರು ಸ್ತುತ್ಯಾರ್ಹರು.

ವಿವಾಹದ ಪದ್ಧತಿಗಳಲ್ಲಿ ಕೊಡಗಿನ ಗೌಡರ ಕ್ರಮವು ದ. ಕ. ಗೌಡರ ಪದ್ಧತಿಗಿಂತ ಸ್ವಲ್ಪ ಭಿನ್ನವಾಗಿದೆ ಕೊಡಗಿನ ಗೌಡರು 1799ರಲ್ಲಿ ವಿಶಾಲ ಕೊಡಗಿನಿಂದ ಇತ್ತ, ಈಗಿನ ಕೊಡಗಿಗೆ ಬಂದು ನೆಲಸಿದ ನಂತರ ಇಲ್ಲಿನ ಬಹುಸಂಖ್ಯಾತ ನಿವಾಸಿಗಳಾದ ಕೊಡಗರ ಕೆಲ ಸಂಪ್ರದಾಯಗಳನ್ನು ಅಳವಡಿಸಿಕೊಂಡಿರುವುದೇ ಇದಕ್ಕೆ ಕಾರಣ ಎನ್ನಬಹುದು.

ಕೊಡಗಿನ ಅರೆಭಾಷಾ ಗೌಡರು—ಧಾರಾ ಮುಹೂರ್ತ, ತಾಳಿ ಕಟ್ಟುವುದು, ಮದರಂಗಿ ಶಾಸ್ತ್ರ, ಸೋಬಾನೆ ಹೇಳುವುದು, ಅಕ್ಕಿ ಹಸೆ, ಚಪ್ಪರದ ಕಂಬಗಳನ್ನು ಹಾಕುವುದು, ವೀಳ್ಯ ಶಾಸ್ತ್ರಗಳು, ದಿಬ್ಬಣ ಹೊರಡುವುದು, ನಾಗೋಳಿ ಶಾಸ್ತ್ರ, ತುಪ್ಪ ತರುವುದು, ಹತ್ತು ಕೂರುವುದು, ಆಟ ಕೂರುವುದು ಇವುಗಳನ್ನು ಕನ್ನಡ ಜಿಲ್ಲೆಯವರಂತೆ ಆಚರಿಸಿದರೆ, ಚಪ್ಪರದ ದಿನ ಊರು ಕೂಡುವ, ಧಾರಾ ಮುಹೂರ್ತಕ್ಕೆ ಮುನ್ನ ಹಣ ಕಟ್ಟುವುದು ಹಾಗೂ ಊಟೋಪಚಾರದ ವ್ಯವಸ್ಥೆಯಲ್ಲಿ ಭಿನ್ನತೆ ಕಂಡುಬರುತ್ತದೆ.

ಕೊಡಗಿನ ಅರೆಭಾಷೆ ಗೌಡರ ವಿವಾಹಗಳಲ್ಲಿ ಆಯಾಯ ಗ್ರಾಮದ ಎಲ್ಲಾ ಜಾತಿ ಜನರನ್ನು ಊರು ಕೂಡುವುದಕ್ಕೆ ಆಹ್ವಾನಿಸುತ್ತಾರೆ. ಆ ದಿನ ಊರಿನ ಎಲ್ಲಾ ಜನ ಬಂದು ಸೇರಿ ಜಾತಿಭೇದ ಮರೆತು, ಫಲಾಹಾರ, ಭೋಜನವನ್ನು ಸ್ವೀಕರಿಸಿ ಊರುಪತ್ತಿಯಲ್ಲಿ ಭಾಗವಹಿಸುತ್ತಾರೆ. ಪರಸ್ಪರ ಅನ್ಯೋನ್ಯತೆ ಗ್ರಾಮದ ಜನರಲ್ಲಿ ಶುಭ ಮತ್ತು ಅಶುಭ ಸಮಾರಂಭಗಳಲ್ಲಿ ಸಹಕಾರಿಯಾಗಲು ಅನುಕೂಲವಾಗಿದೆ. ವಿವಾಹ ಕಾರ್ಯಗಳನ್ನು ನಡೆಸುವಾತ, ತಾನು ತನ್ನ ಶಕ್ತ್ಯಾನುಸಾರ ಕಾರ್ಯ ಮಾಡುತ್ತಿರುವುದಾಗಿ ತಾನು ಕೊಡುವ ತಿಂಡಿ—ತಿನಿಸುಗಳನ್ನು ಪ್ರೀತ್ಯಾದರಗಳಿಂದ ಸ್ವೀಕರಿಸಿ ತನ್ನ ಕಾರ್ಯದಲ್ಲಿ ಸಹಕರಿಸಲು ಕೇಳಿಕೊಳ್ಳುತ್ತಾನೆ. ಹಿಂದಿನ ಕಾಲದ ವಿವಾಹಗಳಲ್ಲಿ ಅನ್ನ ಮತ್ತು ಬಟ್ಟಲು ಹಿಟ್ಟು [ಇಡ್ಲಿ] ಅನ್ನು ಭೋಜನಕ್ಕೆ ವ್ಯವಸ್ಥೆಗೊಳಿಸುತ್ತಿದ್ದು, ಈಗಿನಂತೆ ಪಲಾವು, ಬಿರಿಯಾನಿ, ಪಾಯಸ ಹೀಗೆ ವಿವಿಧ ರೀತಿಯ ಭಕ್ಷ್ಯಗಳನ್ನು ತಯಾರಿಸುತ್ತಿರಲಿಲ್ಲ. ಆಗ ಊರ ಮಂದಿ ಜಾತಿಬೇಧವಿಲ್ಲದೆ ಮದುವೆಗೆ ಬೇಕಾದ ವೀಳ್ಯದೆಲೆ, ಅಡಿಕೆ, ಬಾಳೆಎಲೆ, ಬಾಳೆಹಣ್ಣು, ಇಡ್ಲಿ ಮುಂತಾದವುಗಳನ್ನು ಪುಕ್ಕಟೆಯಾಗಿ ತಯಾರುಮಾಡಿ ಮದುವೆ ಮನೆಗೆ ಹೊತ್ತು ತಂದು ಕೊಟ್ಟು ನೆರವಾಗುತ್ತಿದ್ದರು. ಆದರೆ ಈಗ ನವನಾಗರೀಕತೆ, ರಾಜಕೀಯ ಮತ್ತಿತರ ಕಾರಣಗಳಿಂದ ಗ್ರಾಮದಲ್ಲಿ ಬಹುಮಟ್ಟಿಗೆ ಸೌಹಾರ್ಧತೆ ಕುಂಠಿತಗೊಂಡಿದೆ. ಹಿಂದೆ ಕೊಡಗಿನಲ್ಲಿ ವರ ಅಥವಾ ವಧುವಿನ ಮನೆಯಲ್ಲಿ ಧಾರಾ ಮುಹೂರ್ತಕ್ಕಿಂತ ಮೊದಲೇ, ಹೆಣ್ಣು ಯಾ ಗಂಡಿಗೆ ಅರತಕ್ಷತೆ ಮಾಡಿ, ನಂತರ ಪೆಟ್ಟಿಗೆ ತುಂಬಿಸಿಕೊಟ್ಟು ಗಂಡಿನ ದಿಬ್ಬಣ ಹೊರಟು ಹೆಣ್ಣಿನ ಮನೆಗೆ ತಲುಪುತ್ತಿತ್ತು. ಕೆಲವು ಕಡೆ ಈ ಕ್ರಮ ಈಗಲೂ ಆಚರಣೆಯಲ್ಲಿದೆ.

ಕೊಡಗಿನಲ್ಲಿ ದಂಪತಿ ಮುಹೂರ್ತವೆಂಬ ನವೀನ ರೀತಿಯ ವಿವಾಹ ಪದ್ಧತಿ ಈಚೆಗೆ ಹುಟ್ಟಿಕೊಂಡಿದೆ. ಕಲ್ಯಾಣ ಮಂಟಪಗಳು ಸಾಕಷ್ಟು ನಿರ್ಮಾಣಗೊಂಡಿವೆ. ದಂಪತಿ ಮುಹೂರ್ತವೆಂದರೆ ಹೆಣ್ಣು ಮತ್ತು ಗಂಡಿನ ಕಡೆಯ ಇಬ್ಬರೂ ಒಂದೇ ಕಡೆ ಸೇರಿ ಶಾಸ್ತ್ರಗಳನ್ನು ಆಚರಿಸುವುದು. [ಶಾಸ್ತ್ರಗಳನ್ನು ಗಂಡು ಹೆಣ್ಣುಗಳಿಬ್ಬರಿಗೂ ಪ್ರತ್ಯೇಕ ಕೋಣೆಯಲ್ಲಿ ನಡೆಸುವರು] ಆದರೆ ಈ ರೀತಿಯ ವಿವಾಹ ಪದ್ಧತಿಗಳು ಹಿಂದಿನ ಕಾಲದ ಪದ್ಧತಿಗಳಂತೆ ಕ್ರಮಬದ್ಧವಾಗಿ ಆಚರಣೆಯಲ್ಲಿರುವುದಿಲ್ಲ. ಸಮಯದ ಅಭಾವದಿಂದ ಕೆಲವು ಶಾಸ್ತ್ರಗಳನ್ನು ಬಿಟ್ಟು ಮೊಟಕುಗೊಳಿಸುವರು. ದಂಪತಿ ಮುಹೂರ್ತದ ಆಚರಣೆ

ಯಿಂದ ಕೆಲವು ಅನುಕೂಲಗಳೂ ಇವೆ. ಎರಡೂ ಕಡೆಯವರು ಒಟ್ಟು ಸೇರಿ ಮಾಡಿದಾಗ ಖರ್ಚು ಕಡಿಮೆಯಾಗುತ್ತವೆ. ಸ್ಥಳಾವಕಾಶ, ಭೋಜನದ ವ್ಯವಸ್ಥೆ, ಸಲಕರಣೆಗಳು ಹಾಗೂ ಇನ್ನು ಮುಂತಾದವುಗಳನ್ನು ಬಹು ಸುಲಭವಾಗಿ ಕಲ್ಯಾಣ ಮಂಟಪಗಳಲ್ಲಿ ನಿವಾರಿಸಬಹುದು.

ವಿವಾಹ ಸಮಾರಂಭದಲ್ಲಿ ಸಹಸ್ರಾರು ಜನರಿಗೆ ಆಮಂತ್ರಣ ನೀಡಿ ಆಡಂಬರ ಮಾಡುವ ಬದಲು ಆದಷ್ಟು ಕಡಿಮೆ ಸಂಖ್ಯೆಯಲ್ಲಿ ತಮ್ಮ ಬಂಧು–ಬಳಗದವರನ್ನು ಆಹ್ವಾನಿಸಿ ಕಡಿಮೆ ಖರ್ಚಿನಲ್ಲಿ ಪ್ರತಿಯೊಂದು ಪದ್ಧತಿಗಳನ್ನು ಸರಿಯಾಗಿ ನಡೆಸಿ ವೆಚ್ಚವನ್ನು ಆದಷ್ಟು ಕಮ್ಮಿ ಮಾಡಬೇಕು. ದುಂದುಗಾರಿಕೆ ಮಾಡುವಂತಿರಬಾರದು.

ಹೆಣ್ಣು ಮಾತಿನ ನಿಶ್ಚಯದ ದಿನದಿಂದ ಹಿಡಿದು ತುಪ್ಪದ ಕಟ್ಟಿಗೆ ಹೋಗುವ ದಿನದವರೆಗಿನ ಪದ್ಧತಿ ನವದಂಪತಿಗಳ ಮನಸ್ಸಿನಲ್ಲಿ ಹೊಸ ರೀತಿಯ ಅರಿವು ಉಂಟುಮಾಡುತ್ತದೆ. ಭಾವೀ ದಂಪತಿಗಳಾಗಿ ಬದುಕಿ ಬಾಳುವ ಇವರಲ್ಲಿ ತಮ್ಮ ವಿವಾಹದಲ್ಲಿ ನಡೆದ ಕಾರ್ಯಕ್ರಮಗಳು ತಮ್ಮ ಜೀವನದ ಸ್ಮೃತಿಯಲ್ಲಿ ಅಚ್ಚಳಿಯದೆ ಮುದ್ರಿತಗೊಂಡು ಹಿಂದೂ ಸಮಾಜದಲ್ಲಿ ಪತಿ–ಪತ್ನಿ ಎಂಬುದು ಏಳೇಳು ಜನ್ಮಕ್ಕೂ ಸಂಬಂಧಪಟ್ಟಿದೆಂಬ ಪವಿತ್ರ ಭಾವನೆ ಮೂಡಲು ಅವಕಾಶವಾಗುತ್ತದೆ. ಆದ್ದರಿಂದಲೇ ಹಿಂದೂ ಸಮಾಜದಲ್ಲಿ ವಿವಾಹದ ಪದ್ಧತಿಗಳನ್ನು ಅಳವಡಿಸಿ ಹೆಣ್ಣು ಮತ್ತು ಗಂಡಿಗೆ ವಿವಾಹವೆಂಬುದರ ಅರ್ಥವನ್ನು ಕಲ್ಪಿಸುವಂತೆ ಮಾಡಲಾಗಿದೆ.


ಪರ ರಾಷ್ಟ್ರಗಳಲ್ಲಿರುವಂತೆ ಹಿಂದೂ ವಿವಾಹವು ಬರೀ ಪ್ರೇಮ ಪ್ರಕರಣದ ವಿವಾಹ ಒಪ್ಪಂದವಲ್ಲ. ನಮ್ಮಲ್ಲಿ ಪಾಶ್ಚಾತ್ಯ ದೇಶಗಳಲ್ಲಿರುವಂತೆ ವಿವಾಹ ವಿಚ್ಛೇದನಗಳು ಅತೀ ಸುಲಭ ಸಾಧ್ಯವಲ್ಲ. ಪುರಾತನ ಹಿಂದೂ ಸಮಾಜದಲ್ಲಿ ವಿವಾಹ ವಿಚ್ಛೇದನೆಯೆಂಬ ಪದವೇ ಇದ್ದಿಲ್ಲ. 1955ರಲ್ಲಿ ತಯಾರಾದ ಹಿಂದೂ ವಿವಾಹ ಅಧಿನಿಯಮದ ಪ್ರಕಾರ ಮೊಟ್ಟಮೊದಲಿಗೆ ಪಾಶ್ಚಾತ್ಯರ ಅಥವಾ ಅನ್ಯಮತದ ಕಾನೂನಿನ ಅಂಶವನ್ನು ಅಳವಡಿಸಿಕೊಳ್ಳಲಾಯಿತು. ನಮ್ಮ ಸಮಾಜವು ದೈನಂದಿನ ಜೀವನೋಪಾಯಕ್ಕೆ ತೊಂದರೆ ಪಟ್ಟರೂ ಸಾಂಸಾರಿಕ ನೆಲೆಯಲ್ಲಿ ಅನ್ಯದೇಶದವರಿಗಿಂತ ತೃಪ್ತಿಕರ ಜೀವನವನ್ನು ಸಾಗಿಸುತ್ತಿರುವುದು ಹೆಮ್ಮೆಯ ವಿಚಾರ. ಆದುದರಿಂದಲೇ ಪತ್ನಿಯಾದವಳು ತನ್ನ ಪತಿ ಎಷ್ಟೇ ಕುಡುಕ–ಲಂಪಟನಾಗಿ, ಬಡವನಾಗಿ, ದುಷ್ಟ ಚಟಗಳಿಗೆ ಬಲಿಯಾಗಿದ್ದರೂ ಸಹ ಜೀವನಪರ್ಯಂತ ಈತನೇ ನನ್ನ ಗಂಡ ಅಥವಾ ಈಕೆಯೇ ನನ್ನ ಹೆಂಡತಿ ಎಂಬ ಪವಿತ್ರ ಭಾವನೆಯನ್ನು ಹೊಂದಿರುವುದನ್ನು ಕಾಣಬಹುದು. ಭಾರತೀಯರಲ್ಲಿ ಪಾಶ್ಚಾತ್ಯ ದೇಶಗಳಲ್ಲಿರುವಂತೆ ಆಧುನಿಕ ವ್ಯವಸ್ಥೆಗಳ ಉಪಕರಣಗಳುಳ್ಳ ಕುಟುಂಬಗಳಿಲ್ಲದಿರಬಹುದು. ಬಹುತೇಕ ಜನರು ಹಳ್ಳಿಗಾಡಿನಲ್ಲಿ, ಗುಡಿಸಲಿನಲ್ಲಿ ವಾಸಿಸುತ್ತ ಒಪ್ಪೊತ್ತಿನ ಅನ್ನಕ್ಕೂ ಬಟ್ಟೆ ಬರೆಗಳಿಗೆ ಬವಣೆ ಪಡುತ್ತಿರಬಹುದು, ಆದರೆ ಅವರ ಸಾಂಸಾರಿಕ ಜೀವನ ಬಹುಮಟ್ಟಿಗೆ ತೃಪ್ತಿದಾಯಕ. ಈ ವಿಷಯದ ಬಗ್ಗೆ ಸ್ವಾಮಿ ವಿವೇಕಾನಂದರು ಹೀಗೆ ಹೇಳಿರುತ್ತಾರೆ.

ಪಾಶ್ಚಾತ್ಯ ದೇಶಗಳಲ್ಲಿ ಹೊರನೋಟಕ್ಕೆ ನೋಡಲು ಸುಖ–ಸಂತೋಷವಾಗಿರುವಂತೆ ತೋರುತ್ತದೆ. ಆದರೆ ತಳದಲ್ಲಿ ಅದು ಒಂದು ಗೋಳಿನ ಕಥೆಯಾಗಿ ದುಃಖದಲ್ಲಿ ಕೊನೆಗೊಳ್ಳುತ್ತದೆ. ಆದರೆ ಭಾರತದಲ್ಲಿ ಹೊರನೋಟಕ್ಕೆ ದುಃಖಕರ ಹಾಗೂ ಮಂಕು ಕವಿದಂತೆ ಕಂಡರೂ ತಳದಲ್ಲಿ ಯಾವ ಅಡೆತಡೆ ಇಲ್ಲದ ಆನಂದವಿದೆ. ವಿವೇಕಾನಂದರು ಈ ನುಡಿಯನ್ನು ನೂರು ವರ್ಷಗಳ ಹಿಂದೆ ಹೇಳಿದ್ದು. ಈಗ ಅಲ್ಲಿನ ಪರಿಸ್ಥಿತಿ ಇನ್ನೂ ಉಲ್ಬಣಾವಸ್ಥೆಯಲ್ಲಿರುವುದು ಗಮನಾರ್ಹ ! ಆದುದರಿಂದ ಭಾರತದಲ್ಲಿ ವಿವಾಹವೆಂದರೆ ಕೇವಲ ತಾಳಿ ಕಟ್ಟಿಸಿ ಗಂಡು–ಹೆಣ್ಣನ್ನು ಜೊತೆಗೂಡಿಸುವ ಸಮಾರಂಭ ಮಾತ್ರವಲ್ಲ. ಇವರು ಆಜೀವ ಪರ್ಯಂತ ಪತಿ–ಪತ್ನಿಯರೆಂಬ ಭಾವನೆಯನ್ನುಂಟುಮಾಡುವುದಕ್ಕೆ ಕುಟುಂಬದವರು, ಸೋದರಮಾವ, ಬಂಧು–ಬಳಗ ಸೇರಿ ಗಣಕೂಟ ಹೊಂದಿದ ತರುವಾಯ ಹಂತ ಹಂತ ಆಗಬೇಕಾದ ಶಾಸ್ತ್ರಗಳನ್ನು ಚಾಚೂ ತಪ್ಪದೆ ನಡೆಸಿದರೆ ಈ ಎಲ್ಲಾ ಶಾಸ್ತ್ರ ವಿಧಿಗಳು ಹೆಣ್ಣು–ಗಂಡಿನ ಸಂಬಂಧ, ಸೋದರ ಸಂಬಂಧ, ಬಂಧು ಮಿತ್ರರ ಸಂಬಂಧ ನಂತರವೂ ಹೇಗಿರಬೇಕೆಂಬ ಅರಿವು ವಧು–ವರರಿಗೆ ಮನವರಿಕೆಯಾಗುವಲ್ಲಿ ಅತ್ಯುಪಯುಕ್ತವಾಗುತ್ತದೆ. ಮದುವೆಯಲ್ಲಿ ನಡೆಯುವ ಸಂಸ್ಕಾರ–ಪದ್ಧತಿಗಳು ವಧೂ–ವರರಲ್ಲಿ ಪರಿಪೂರ್ಣವಾದ ಜೀವನದ ಸಂಗಾತ್ಯವನ್ನು ಬೆಳೆಸುವುದಕ್ಕೆ ಅಡಿಗಲ್ಲಾಗುತ್ತದೆ. ಸಮಾಜವೂ ಅರಿಯುವ, ಬಂಧು–ಬಳಗದವರೂ ಮನ್ನಿಸುವ ರೀತಿಯಲ್ಲಿ ವಿವಾಹ ಗೊಳ್ಳಬೇಕಾದರೆ ನಮ್ಮಲ್ಲಿರುವ ಸಂಪ್ರದಾಯಗಳನ್ನು ಕುಂಠಿತಗೊಳಿಸಿ ವಿಜೃಂಭಣೆಯಿಂದ ಆಚರಿಸುವ ಬದಲು ಕ್ರಮವಾದ ಸಂಪ್ರದಾಯವನ್ನು ಆಚರಿಸಿ ಸರಳ ರೀತಿಯ ಮದುವೆ ನಮ್ಮ ಸಂಸ್ಕೃತಿಯನ್ನು ಉಳಿಸುತ್ತದೆ. ●

ಲೇಖಕ : ಪ್ರೊ॥ ಪೂಜಾರಿರ ನೊಣ್ಣಪ್ಪ, ಬೆಂಗಳೂರು.

## ಹಿತನುಡಿ

ಒಳ್ಳೆಯ ಮಿತ್ರರನ್ನು ಹುಡುಕುವುದಕ್ಕೆ ಮೊದಲು ನಾವು ಒಳ್ಳೆಯವರಾಗಬೇಕು. —ಸುಭಾಷಿತ




○ ಕೌಂಡಿನ್ಯ

**ಧಾರಾವಾಹಿ-4**

ರೇವತಿಯ ಕಣ್ಣುಗಳು ಅರಳಿತು !

ಎದುರುಗಡೆಯಿದ್ದ ರೂಮಿನಿಂದಬ್ರೌನ್ ಕಲರ್ ಸಫಾರಿ ಡ್ರೆಸ್ ಅನ್ನು ಧರಿಸಿದ್ದ ಸುಂದರ ಯುವಕ ಬಂದನು.

ಎತ್ತರದ ನಿಲುವಿನ ಚೆಲುವ !

ಹದವಾದ ಎದೆ !

ಉಕ್ಕಿನಂತಹ ತೋಳು, ತೊಡೆಗಳು ! ಗಾಳಿಗೆ ಹಾರಾಡುತ್ತಿರುವ ತಲೆಯ ಕೂದಲನ್ನು ಸರಿಪಡಿಸಿಕೊಂಡು ಇವರ ಎದುರಿಗೆ ಬಂದು ಸೋಫಾದಲ್ಲಿ ಕುಳಿತನು.

ನಗು ಮುಖದ ಸುಂದರ !

ಚಿಗುರು ಮೀಸೆಯಡಿ ಹವಳದ ತುಟಿಗಳು ! ರೇವತಿ ಕಣ್ಣಿನ ರೆಪ್ಪೆಯನ್ನು ಸಹ ಅಡಿಸದೆ ಬೆರಗಾಗಿ ಈ ಮನ್ಮಥನನ್ನೇ ನೋಡುತ್ತಿದ್ದಾಳೆ !

ಇವಳು ಅಂದುಕೊಂಡಿದ್ದೇನು ? ಎಡತೊರೆ ಮನೆತನದ ಶ್ರೀಮಂತ ಮದುವೆಯ ಗಂಡು ಹಳ್ಳಿ ಹುಂಬನಂತೆ ಇರುತ್ತಾನೆ ಅಂತ !

ಕಾಲೇಜಿನ ಯುವಕನಂತೆ ಮಿಂಚುತ್ತಿದ್ದಾನೆ. ಆ ಯುವಕ ಎದ್ದು ಬಂದು ತನ್ನ ಕೈ ಚಾಚುತ್ತಾ 'ಗ್ಲ್ಯಾಡ್ ಟು ಮೀಟ್ ಯೂ. ಐ ಯಾಮ್ ಪ್ರಸನ್ನ !'

ಇಂಗ್ಲೀಷ್ ಬೇರೆ ಬರುತ್ತದೆ !

ರೇವತಿ ತನ್ನ ಕೈ ಸೇರಿಸಿದಳು. ಪ್ರಸನ್ನ ಈಗ ಅವಳು ಹುರಿದಂತೆ ಇಂಗ್ಲೀಷ್‌ನಲ್ಲಿ ಇವಳನ್ನು ಪ್ರಶ್ನೆಗಳನ್ನು ಕೇಳುತ್ತಿದ್ದಾನೆ.

ರೇವತಿ ತಡವರಿಸುತ್ತಲೇ ಉತ್ತರಿಸುತ್ತಿದ್ದಾಳೆ. ಅವಳು ಟೋಟಲ್ ಆಗಿ ಸ್ಪನ್ ಆಗಿದ್ದಳು.

ನೋಡುತ್ತಲೇ ಇವ ಬೇಕು ಎನಿಸುವ ಆಕರ್ಷಕ ರೂಪಿನ ಮನ್ಮಥ ಈ ಪ್ರಸನ್ನ !

ಮನಸ್ಸು ಸಡಿಲವಾಗುತ್ತಿದೆ ! ರೇಗಿಸಿ, ಹಾಸ್ಯ ಮಾಡಿ ತಮಾಷೆ ಮಾಡಬೇಕು ಎಂದುಕೊಂಡಿದ್ದವಳು ಕ್ಲೀನ್ ಬೌಲ್ಡ್ ಆಗಿದ್ದಾಳೆ.

ಸೌಜನ್ಯ, ಲಜ್ಜೆ ಸಹ ಮರೆತು ಅವನನ್ನು ನೋಡುತ್ತಿದ್ದಾಳೆ ರೇವತಿ !

ಅವಳಿಗೆ ಪರಮಾಶ್ಚರ್ಯವಾಯಿತು. ಯಾಕೆ ಅಂದರೆ ಪ್ರಸನ್ನ ಒಬ್ಬನೇ ಮಾತನಾಡುತ್ತಿದ್ದಾನೆ ವಿನಃ ಉಳಿದವರ್‍ಯಾರು ಬಾಯಿ ತೆರೆದಿರಲಿಲ್ಲ !

ಹೋಗಲಿ ರಿಯಾಕ್ಷನ್ ಕೂಡಾ ಇಲ್ಲ !

ಮಂಕು ಬಡಿದವರಂತೆ ಕುಳಿತಿದ್ದರು ! ಇವರ್‍ಯಾರು ? ಇಲ್ಲೇಕೆ ಅಲಂಕರಿಸಿಕೊಂಡು ಶೋಕೇಸ್‌ನಲ್ಲಿ ಇರುವ ಗೊಂಬೆಗಳಂತೆ ಇದ್ದಾರೆ !

ಅವಳ ಮನಸ್ಸಿನ ಭಾವನೆಗಳನ್ನು ಅರ್ಥ ಮಾಡಿಕೊಂಡವನಂತೆ ಪ್ರಸನ್ನ 'ಬೈ ದಿ ಬೈ ಈಕೆ ನನ್ನ ಅಕ್ಕ ಅರುಂಧತಿ ಅಂತ' ಎಂದು ಅವಳತ್ತ ನೋಡಿದನು.

ಪ್ರಸನ್ನನ ಕಣ್ಣುಗಳಲ್ಲಿ ಸೂಚನೆ !

ಅವಳು ಗತ್ತಿನಿಂದಲೇ ಕೈಮುಗಿದಳು !

ಪ್ರಸನ್ನ ಈಗ 'ಇವನು ವೀರಭದ್ರ, ಅವನು ಲಿಂಗಯ್ಯ ಅಂತ, ನನ್ನ ಅಣ್ಣಂದಿರು' ಎಂದು ದೃಷ್ಟಿ ಹರಿಸಿದನು.

ಅರುಂಧತಿ ಮೊಣಕ್ಕೆ ತಿವಿದಳು.

ಅವರಿಬ್ಬರು ನಮಸ್ಕರಿಸಿದರು. ರೇವತಿ ಬೆಚ್ಚಿಬಿದ್ದಳು. ಈ ಕೋಡಂಗಿಗಳು ಚೆಲುವನ ಅಣ್ಣಂದಿರು. ಇವರುಗಳ ನಡುವೆ ಹೋಲಿಕೆಯೇ ಇಲ್ಲವಲ್ಲ !

ಈ ಕೋಡಂಗಿಗಳಿಗೆ ಮದುವೆ ಆಗಿರುವುದೆ?

ಮತ್ತೊಂದು ಸಂಶಯ ಬಂದಿತು.

ಇವರಿಬ್ಬರಲ್ಲೇ ಒಬ್ಬರಿಗೆ ಮದುವೆ ಮಾಡಲು ವಧು ಬೇಕಾಗಿದೆ ಅಂತ ಜಾಹೀರಾತನ್ನು ನೀಡಿರಬಹುದೆ !

ಪ್ರಸನ್ನ ಈಗ ಅವಳ ಒಟ್ಟು ಅಭಿರುಚಿ ಮತ್ತು ಹವ್ಯಾಸಗಳ ಬಗ್ಗೆ ಹಲವಾರು ಪ್ರಶ್ನೆಗಳನ್ನು ಕೇಳಿದನು.

ಅದು ಸರಿ ಮದುವೆ ಗಂಡು ಯಾರು ?

ರೂಮಿನ ಬಾಗಿಲು ದಢಾರನೆ ತೆರೆಯಿತು ! ಇವಳು ಬಂಗಲೆಗೆ ಬಂದಾಗ ರೂಮಿನ ಕಿಟಕಿಯಿಂದ ಆಗಾಗ ಇಣುಕಿ ನೋಡುತ್ತಿದ್ದ ಮುದುಕ ಬಂದನು.

ಕ್ಷಮಿಸಿ ಅವನು ಮುದಕ ಅಲ್ಲ !

ನಲವತ್ತರ ಪ್ರಾಯ !

ಪಂಚೆ, ಬನಿಯನ್ ಧರಿಸಿದ್ದನು. ಈ

ಇಲ್ಲಿಯವರೆಗೆ............

ರೇವತಿಗೆ ಸಂಪಿಗೆಪುರದಿಂದ ಸಂದರ್ಶನಕ್ಕೆ ಕರೆ ಬರುತ್ತದೆ.
ಅವಳು ಮಾರನೆಯ ದಿನ ಹೊರಡುತ್ತಾಳೆ. ಎಡತೊರೆಯ
ಶ್ರೀಮಂತರ ಬಂಗಲೆಗೆ ಬಂದಾಗ ಮಧ್ಯ ವಯಸ್ಸಿನ
ಇಬ್ಬರು ಗಂಡಸರು ಮತ್ತು ಹೆಂಗಸು ಬರುತ್ತಾರೆ.
ರೇವತಿ ನೋಡುತ್ತಿರುವಂತೆಯೇ
ಮದುವೆಯ ಗಂಡು ಬರುತ್ತಾನೆ.

ಮುಂದೆ ಓದಿ...............

ಪ್ರಾಯಕ್ಕೆ ತಲೆಯ ಕೂದಲು, ಗಡ್ಡ ನೆರೆತಿದ್ದರಿಂದ ಆ ರೀತಿ ಕಾಣುತ್ತಿದ್ದನು.

ಅವನ ಹೆಸರು ಮಂಜಯ್ಯ !

ಮಂಜಯ್ಯ ಏನನ್ನೋ ತಿನ್ನುತ್ತಾ ಬಂದು ದಷ್ಟಪುಷ್ಟ ದೇಹದ ಅರುಂಧತಿಯ ಪಕ್ಕದಲ್ಲಿ ಕುಳಿತುಕೊಂಡು 'ಅದು...ಅದು...ನಂಗೆ ಹೊಟ್ಟೆ ಹಸಿಯುತ್ತಿದೆ. ಬೇಗ ಊಟ ಹಾಕಲು ಹೇಳು' ಎಂದು ಅವಳಕೈ ಹಿಡಿದು ಕೊಂಡನು.

ಪ್ರಸನ್ನ ಅಲ್ಲಿದ್ದ ಕೆಲಸದ ಆಳುಗಳ ಕಡೆ ಉರಿಗಣ್ಣಿನ ನೋಟ ಬೀರಿದನು.

ಕೆಲಸದವರು ಭಯದಿಂದಲೇ ಬಂದು ಮಂಜಯ್ಯನ ತೋಳನ್ನು ಹಿಡಿದು ಒಳಗೆ ಎಳೆದುಕೊಂಡು ಹೋದರು.

ಅರುಂಧತಿ ಮುಖ ಸಿಂಡರಿಸಿದ್ದಾಳೆ !

ಪ್ರಸನ್ನ ಈಗ ರೇವತಿಯ ಕಡೆ ತಿರುಗಿ 'ಬೈ ದಿ ಬೈ ಅವರು ನನ್ನ ಅಕ್ಕನ ಗಂಡ' ಎಂದನು.

ರೇವತಿಗೆ ಅತ್ಯಾಶ್ಚರ್ಯ...ಅಪನಂಬಿಕೆ! ಇದೆಂತಹ ಜೋಡಿ ?

ಇವಳು ಹೀಗೆ...ಗಂಡ ಹಾಗೆ !

ಇದನ್ನು ಅರ್ಥ ಮಾಡಿಕೊಂಡ ಪ್ರಸನ್ನ ಮೆಲ್ಲಗೆ 'ಐ ಕ್ಯಾನ್ ಅಂಡರ್ ಸ್ಟ್ಯಾಂಡ್ ಯುವರ್ ಫೀಲಿಂಗ್ಸ್. ಅವರಿಗೆ ತಲೆ ಸರಿ ಇಲ್ಲ.'

ರೇವತಿಯ ದೃಷ್ಟಿ ಹೊರಳಿತು !

ವೀರಭದ್ರ ..ಲಿಂಗಯ್ಯನ ಕಡೆ!

ಮುಖದಲ್ಲಿ ಫೀಲಿಂಗ್ಸ್ ಇಲ್ಲದೆ ಮಂಕು ಬಡಿದವರಂತೆ ಕುಳಿತಿರುವ ಇವರಿಬ್ಬರ ತಲೆಗಳು ಸರಿಯಾಗಿದೆಯೇ ?

ಪ್ರಸನ್ನ ಗಂಭೀರವಾಗಿ 'ಈ ಮನೆಗೆ ಸೊಸೆಯಾಗಲು ನಿಮಗೆ ಎಲ್ಲಾ ರೀತಿಯ ಅರ್ಹತೆ ಇದೆ.

ಗಾಬರಿಯಾದಳು ರೇವತಿ !

ಅರೆ...ಅರೆ...ಗಂಡು ಯಾರು ?

ಈ ಕೋಡಂಗಿಗಳಲ್ಲಿ ಒಬ್ಬರೆ !

ನೇರವಾಗಿ ಕೇಳಲು ಸಂಕೋಚ ಎನಿಸಿ 'ಮಿಸ್ಟರ್ ಪ್ರಸನ್ನ.. ನಿಮ್ಮ ಅಣ್ಣಂದಿರಿಗೆ ಮದುವೆಯಾಗಿದೆಯೆ ?'

'ಇಲ್ಲ' ಎಂದನು ನಿರ್ಲಿಪ್ತನಾಗಿ !

ರೇವತಿಗೆ ಸಂದೇಹ ಉಳಿಯಲಿಲ್ಲ. ನೋಡಲು ಪೆದ್ದ ಗುಂಡನಹಾಗೆ ಕಾಣುತ್ತಿರುವ ಈ ಎರಡು ಮಂದಿಗಳನ್ನು ಮದುವೆಯಾಗಲು ಊರಿನಲ್ಲಿ ಯಾವ ಹೆಣ್ಣು ಸಹ ಒಪ್ಪಿಲ್ಲ. ಅದಕ್ಕೆ ಪತ್ರಿಕೆಯಲ್ಲಿ ಜಾಹಿರಾತು ನೀಡಿದ್ದಾನೆ.

'ನಿಮ್ಮ ಅಭಿಪ್ರಾಯ ಏನು ?' ಎಂದು ಪ್ರಸನ್ನ ಅವಳ ಮುಖವನ್ನೇ ನೋಡುತ್ತಾ ಕೇಳಿದನು.

ರೇವತಿ ನಗುತ್ತಾ ತಕ್ಷಣ ಉತ್ತರಿಸಲು ಸಾಧ್ಯವೆ? ಊರಿಗೆ ಹೋಗಿ ನಂತರ ಫೋನ್ ಮಾಡುತ್ತೇನೆ '

ಕಾಫಿ, ತಿಂಡಿಯ ಉಪಚಾರ ನಡೆಯಿತು!

ರೇವತಿ ಸೂಟ್‌ಕೇಸ್ ಅನ್ನು ಎತ್ತಿಕೊಂಡು ಹೊರಡುತ್ತಾ 'ನಿಮ್ಮ ಫ್ರೆಂಡ್ ಟ್ರೀಟ್‌ಮೆಂಟಿಗೆ ಥ್ಯಾಂಕ್ಸ್ ಬರುತ್ತೇನೆ.'

ಪ್ರಸನ್ನ 'ನನಗೇನೋ ನೀವು ಒಪ್ಪಿಗೆಯಾಗಿದ್ದೀರ ? ನಿಮ್ಮ ಅಭಿಪ್ರಾಯ ತಿಳಿಸಿದರೆ ಬೇಗ ಮದುವೆ ಶಾಸ್ತ್ರವನ್ನು ಮುಗಿಸಬಹುದು.'

ಹೋಗುತ್ತಿದ್ದ ರೇವತಿ ಸರ್ರನೆ ಹಿಂತಿರುಗಿದಳು. ಅವಳ ಕಣ್ಣುಗಳು ಸಂತೋಷದಿಂದ ಅರಳಿತು !

ಈ ಚೆಲುವ ಮದುವೆ ಗಂಡು !

ರೇವತಿಗೆ ಗೊತ್ತಿರಲಿಲ್ಲ ! ಈ ಚೆಲುವನ ಹಿಂದೆ ಮಹಾ ನಿಗೂಢತೆಯೇ ಅಡಗಿದೆ ಎಂದು !

[ಸಶೇಷ]

---

**ಕೊಡಗು ಸಂಗಾತಿ ಪತ್ರಿಕೆಗೆ**

**ಇಂದೇ ಚಂದದಾರರಾಗಿ**

# ಕಾವೇರಿ

ಜನನಿ ಜನ್ಮದಾತೆ, ಜಯ ಜನನೀ ಜನ್ಮದಾತೆ
ಲೋಪಮುದ್ರೆ ಲೋಕಪಾವನಿ
ಕಾವೇರಿ ಮಾತೆ ॥ ಜನನಿ ॥

ಕವೇರ ಮುನಿಯ ಪುತ್ರಿಯಾಗಿ
ಅಗಸ್ತ್ಯಋಷಿಯ ಪತ್ನಿಯಾದೆ
ದಕ್ಷಿಣಕ್ಕೆ ಬಂದು ನೆಲಸಿ
ಕೊಡಗು ಮಕ್ಕಳ ಹರಸಿದೆ
॥ ಜನನಿ ॥

ಲೋಕ ಕಲ್ಯಾಣಾರ್ಥವಾಗಿ
ಎಂದೂ ಅಗಲದ ಭಾಷೆ ಪಡೆದೆ
ಕೊಟ್ಟ ಭಾಷೆಯ ಮುರಿದನೆಂದು
ಥಟ್ಟನೆ ನೀರಾಗಿ ಹರಿದೆ.
॥ ಜನನಿ ॥

ಬ್ರಹ್ಮಗಿರಿಯಿಂದಿಳಿದು ಬಂದು
ಕುಂಡಿಗೆಯಲಿ ನೀ ಮೈ ತಳೆದು
ಸಂಗಮದಲಿ ಸಂಗಮಿಸಿ ನೀ
ಸಕಲ ತೀರ್ಥ ಗುಣವ ಪಡೆದೆ.
॥ ಜನನಿ ॥

ಕೃಷ್ಣರಾಜ ಒಡೆಯರ ಚಿಂತನೆಗೆ ಒಲಿದು
ವಿಶ್ವೇಶ್ವರಯ್ಯನ ಜಾಣ್ಮೆಗೆ ಮಣಿದು
ಕನ್ನಂಬಾಡಿಯಲಿ ಕೊಂಚ ವಿಶ್ರಮಿಸಿ
ಕೃಷ್ಣರಾಜ ಸಾಗರವಾಗಿ ಮೆರೆದೆ
॥ ಜನನಿ ॥

ಶ್ರೀರಂಗ ಪಟ್ಟಣಕೆ ಕೋಟೆ ಕಟ್ಟೀ
ಶ್ರೀರಂಗ ನಾಥನ ಪಾದ ತೊಳೆದು
ಬಯಲು ಸೀಮೆಗೆ ನೀರ ಹಣಿಸಿ
ಬೆಂಗಳೂರ ಜನತೆಗೆ ನೀರ ಉಣಿಸಿದೆ.
॥ ಜನನಿ ॥

ಮೇಕೆ ದಾಟಿನಲಿ ಮೈ...ಕುಗ್ಗಿಸಿ
ತಂಜಾವೂರಲಿ ಬೆಳೆಯ ಬೆಳೆಸಿ
ಕಾವೇರಿ ಪಟ್ಟಣಕೆ ಬಂದು ಸೇರಿ
ಬಂಗಾಳ ಕೊಲ್ಲಿಯಲಿ ವಿಲೀನವಾದೆ.
॥ ಜನನಿ ॥

—ಬಿಟ್ಟೀರ ಚೋಂದಮ್ಮ ಶಂಭು,
ಬೆಂಗಳೂರು.

# ಸಾಂಸಾರಿಕ ಜೀವನದಲ್ಲಿ ಎದುರಾಗುವ ತೊಡಕುಗಳನ್ನು ಸಮಾಜ ಬಗೆಹರಿಸುವುದೇ ?

ಪ್ರೇಮ ವಿವಾಹವಾಗಲಿ, ಸಂಪ್ರದಾಯ ಮದುವೆಯೇ ಆಗಲಿ ನಂತರ ಕ್ಷುಲ್ಲಕ ಕಾರಣಕ್ಕಾಗಿ ವಿರಸವೇರ್ಪಡುವುದು ಸರ್ವೇ ಸಾಮಾನ್ಯ.

ಹಿಂದಿನ ಕಾಲದಲ್ಲಿ ಸ್ತ್ರೀ ತಾನು ಮದುವೆಯಾಗಿ ಗಂಡನ ಮನೆಯ ಮೆಟ್ಟಿಲೇರಿದ ನಂತರ ಎಂತಹ ಕಠಿಣ ಪರಿಸ್ಥಿತಿ ಬಂದರೂ ಸಹ ಹತ್ತಿದ ಮನೆಯಿಂದ ಇಳಿಯಬಾರದೆಂಬ ಕಟ್ಟಾ ನಿಯಮವನ್ನು ಹಿಂದಿನ ಪೀಳಿಗೆಯವರು ಇಟ್ಟು ಮಗಳನ್ನು ಮನೆಯಿಂದ ಇಳಿಸಿಕೊಡುತ್ತಿದ್ದರು. ಹೆಣ್ಣು ವಿಧವೆ ಆದಾಗ

**ಬೈತಡ್ಕ ಜಾನಕಿ ಬೆಳ್ಯಪ್ಪ, ಮಡಿಕೇರಿ**

ಮಾತ್ರ ತವರು ಮನೆಯವರು ಆಕೆಯ ನೆರವಿಗೆ ಬರುತ್ತಿದ್ದು, ಆಕೆಗೆ ಮರುವಿವಾಹವನ್ನು ನಡೆಸುತ್ತಿದ್ದರು. ಅಥವಾ ಆಕೆಯ ಗಂಡನ ಅಣ್ಣ ತಮ್ಮ ಇವರೊಂದಿಗೆ ಕೂಡಾವಳಿ ಪದ್ಧತಿಯನ್ನು ಅನುಸರಿಸಿಕೊಂಡು ಸಂತೋಷವಾಗಿ ಬಾಳಿದವರ ಕತೆಗಳನ್ನು ಕೇಳಿದ್ದೇವೆ. ಅಂದಿನ ಸ್ತ್ರೀ ಎಷ್ಟೇ ಕಷ್ಟವಾದರೂ ಅತ್ತೆ ಮಾವಂದಿರ ಕಿರುಕುಳ, ಗಂಡನ ಹೊಡೆತ ಇವುಗಳನ್ನು ಮೈಗೆ ಒಗ್ಗಿಸಿಕೊಂಡು ಈ ತನಕ ಬಾಳಿದ ಅದೆಷ್ಟೋ ಜನ ಮಹಿಳೆಯ ರಿರಬಹುದು.

ಇಂದು ಹಾಗಲ್ಲ, ಮಹಿಳೆಗೆ ಎಲ್ಲಾ ತರದ ಸ್ವಾತಂತ್ರ್ಯವಿದೆ. ಎಲ್ಲಾ ಕಡೆ ಅವಳಿಗೆ ಸ್ಥಾನ ಮಾನಗಳಿವೆ. ವಿದ್ಯಾವತಿಯಾಗಿ ದುಡಿಯುತ್ತಿರುವವರಂತೂ, ಯಾವುದನ್ನು ಲೆಕ್ಕಿಸದೆ ತಾನೊಬ್ಬಳೇ ಬಾಳಬಲ್ಲೆ ಎಂದು ಗಂಡನನ್ನು ತೊರೆದು ತಾನೆ ಬದುಕನ್ನು ರೂಪಿಸಿಕೊಳ್ಳುವಷ್ಟು ಮುಂದಾಗಿದ್ದಾಳೆ. ಇಲ್ಲಿ ಗಂಡಸು ತನ್ನ ಪೌರುಷದ ಗತ್ತನ್ನು ತೋರಿಸಿದರೆ, ಹೆಂಗಸು ಕಾನೂನು ಮತ್ತು ತನ್ನ ಹಕ್ಕನ್ನು ಉಪಯೋಗಿಸಿಕೊಳ್ಳುತ್ತಿದ್ದಾಳೆ. ವಿದ್ಯೆ ಕಲಿತಷ್ಟು ಅನೇಕ ವಿಷಯಗಳು ಬಡವೇಲಾಗಿವೆ. ಇತ್ತೀಚೆಗೆ ಹಳ್ಳಿಯಿಂದ ನಗರದ ತನಕ ಗಂಡ ಹೆಂಡಿರಲ್ಲಿ ಸಹ ಬಾಳ್ವೆಯಿಲ್ಲದೆ ಸಂಶಯ ಮತ್ತು ವಿವಾಹ ವಿಚ್ಛೇದನಗಳು ನಮ್ಮ ಸಮಾಜಕ್ಕೆ ದೊಡ್ಡ ಪಿಡುಗು ಆಗಿ ಕಾಡಲತ್ತಿದೆ. ಇಂತಹ ಪ್ರಕರಣಗಳು ಸಾಕಷ್ಟು ಈಗ ಸಮಾಜದಲ್ಲಿ ಉದ್ಭವ ಗೊಂಡಿದೆ.

ಇಲ್ಲಿ ಬರೀ ಗಂಡ ಹೆಡತಿ ಮಾತ್ರ ತಮ್ಮ ತಮ್ಮದೇ ಧೋರಣೆಯನ್ನು ಅನುಸರಿಸುತ್ತಾರೆ. ಅದೇ ಕೂಲಿ ಕೆಲಸದವರು ಗಂಡ ಕುಡುಕನೆ ಇರಲಿ, ಸೋಮಾರಿಯೆ ಇರಲಿ, ಆಕೆ ಕೂಲಿ ತಂದು ಎಷ್ಟು ನಿಂದನೆಗಳನ್ನು ಸಹಿಸಿಕೊಂಡೂ ಮತ್ತೆ ಪ್ರೀತಿಯಿಂದ ಜೀವನ ನಡೆಸುವುದು ಜೀವನದ ಇನ್ನೊಂದು ಮುಖವನ್ನು ತೋರಿಸುತ್ತದೆ. ಅದರೂ ಅವರ ಮಕ್ಕಳಿಗೆ ವಿದ್ಯೆ ಬುದ್ಧಿ ಕೊಡುತ್ತಾರೆ. ಇಂದು ಅನೇಕ ಕಡೆ ದಾಂಪತ್ಯದಲ್ಲಿ ವಿರಸವೇರ್ಪಟ್ಟರೆ ಅವರಿಬ್ಬರು ಅವರ ಮಗುವಿನ ಬಗ್ಗೆ ಚಿಂತಿಸುವುದೇ ಇಲ್ಲ. ಕೊನೆಗೊಮ್ಮೆ ಕಾನೂನಿನ ಮೊರೆಹೊಕ್ಕು ಮಗುವನ್ನು ಕಿತ್ತಾಡುವ ದುರಂತ ದೃಶ್ಯ ಬೇಕಾದಷ್ಟಿರಬಹುದು. ಇಲ್ಲಿ ಮುಗ್ಧ ಮಕ್ಕಳು ಯಾವ ಪಾಪವನ್ನು ಮಾಡಿದ್ದಾರೆ ? ಅವುಗಳಿಗೆ ತಂದೆ ತಾಯಿ ಇಬ್ಬರೂ ಬೇಕು. ಆ ಇಬ್ಬರ ಪ್ರೀತಿಯೂ ಇಲ್ಲದೆ ಆ ಮಗುವಿನ ಬಗ್ಗೆ ಚಿಂತೆ ಮಾಡುವವರು ಈ ಸಮಾಜದಲ್ಲಿ ಯಾರು ? ವರದಕ್ಷಿಣೆಯ ಪಿಡುಗಿನಿಂದ ಬಡ ಮಧ್ಯಮ ವರ್ಗದ ತಂದೆ ತಾಯಂದಿರು ಮಕ್ಕಳ ಮದುವೆ ಮಾಡುವುದೆ ಒಂದು ಹೊರೆ ಆಗಿದ್ದಾಗ ಮತ್ತೆ ಆ ಮಗಳು ತಿರುಗಿ ತನ್ನ ಆಶ್ರಯ ಪಡೆಯುವುದರಲ್ಲಿ ಸಫಲಳಾದರೂ ಈ ಮದುವೆ ಮತ್ತು ವಿಚ್ಛೇದನ ಇದಕ್ಕೆಲ್ಲ ಅರ್ಥ ಏನು ? ಇದಕ್ಕೆ ಮುಕ್ತಿ ಯಾವುದರಲ್ಲಿ ? ಇಂತಹ ಚಿಂತನೆಗಳನ್ನು ನಮ್ಮ ಸಮಾಜದವರು, ಮಹಿಳಾ ಒಕ್ಕೂಟಗಳು ಬಗೆಹರಿಸುವುದರಲ್ಲಿ ಪಾಲ್ಗೊಳ್ಳುವರೆ ? ಈ ನಿಟ್ಟಿನಲ್ಲಿ ನಮ್ಮ ಜನಾಂಗದವರು ಮುಂಬರುವ ಅಪಾಯವನ್ನರಿತು ಅದಕ್ಕೆ ತಕ್ಕ ಕಾರ್ಯಕ್ರಮ ಹಮ್ಮಿಕೊಂಡು ಕಾರ್ಯಪ್ರವೃತ್ತಿಯಾಗುವರೇ ? ಕಾದು ನೋಡೋಣ. ○

## ಗಂಡು ಬಂದಿತ್ತಾ....

ಗಂಡು ಬಂದಿತ್ತಾ ತಂಗಿ ಗಂಡು ಬಂದಿತ್ತಾ  
ಕುಂಬಳಗಿಂತ ಕುಳ್ಳಗಿತ್ತಾ ತಂಗಿಗಿಂತಾ ತಳ್ಳಾಗಿತ್ತಾ  
ಮರದಿಂದಿಳಿದ ಮಂಗನಂಗೆ ಚಂಗನೆ ಜಿಗಿದಿತ್ತಾ ॥ಗಂಡು॥

ಬಾಯೊಳಗಿರುವ ಹಲ್ಲುಗಳು ಇಣಕಿ ಬಂದಿತ್ತಾ  
ಗೊಗ್ಗರಿರುವ ಮಂಕು ಇತ್ತ  
ಮೂಗು ಬಾಯಿ ಡೊಂಕು ಇತ್ತಾ ॥ಗಂಡು॥

ಡಾಂಬರ್‌ಗಿಂತ ಕಪ್ಪಗಿತ್ತ ಸಿಪ್ಪೆಗಿಂತ ಸಪ್ಪಗಿತ್ತಾ  
ಬಾಯೊಳಗಿನ ಹಲ್ಲು ಜೇನು ಗೂಡು ಕಟ್ಟಿದಂಗಿತ್ತ  
ತಂಗಿ ಕಟ್ಟಿದಂಗಿತ್ತ  
॥ ಗಂಡು ಬಂದಿತ್ತಾ ತಂಗಿ ಗಂಡು ಬಂದಿತ್ತಾ ॥

—ಕುಟ್ಟಿಮಣಿಯನ ರೂಪ ತಮ್ಮಯ್ಯ,  
ಗಾಳಿಬೀಡು.

# ಸಂಘರ್ಷದ ಹಾದಿಯಲ್ಲಿ ಕೊಡಗು. .ಪರಿಹಾರವೇನು ?

ಕೊಡಗು ಭಾರತದ ದಕ್ಷಿಣ ಕಾಶ್ಮೀರವೆಂದೇ ಪ್ರಸಿದ್ಧಿಯಾಗಿದೆ. ಕೊಡಗಿಗೆ ಐತಿಹಾಸಿಕ ಹಿನ್ನೆಲೆ ಇದ್ದವೆಂಬುದು ಪ್ರಸ್ತುತ, ಚರಿತ್ರೆಯ ಪುಟಗಳನ್ನು ತಿರುವಿಹಾಕಿದರೆ, ಭಾರತದ ಸ್ವಾತಂತ್ರ್ಯದಲ್ಲಿ ಮತ್ತು ನಂತರದ ದಿನಗಳಲ್ಲಿ ಕೊಡಗಿನ ಪಾತ್ರ ಏನೆಂಬುದು ತಿಳಿಯುವುದು, ಕೊಡಗಿನ ಸಮೃದ್ಧ ನೆಲ, ಜಲ, ಸಂಪತ್ತು ಮತ್ತು ಸಂಸ್ಕೃತಿ ಹಾಗೂ ಸುಂದರ ಜನಾಂಗ ಪ್ರಪಂಚದ ಯಾವ ಭಾಗದಲ್ಲಿಯೂ ಕಾಣಸಿಗದೆಂದರೆ ತಪ್ಪಾಗ

**ಗುಡ್ಡೆಮನೆ ರಮೇಶ್, ಮಡಿಕೇರಿ**

ಲಾರದು. ಆದರೆ, ಇತ್ತೀಚಿನ ಬೆಳವಣಿಗೆಗಳನ್ನು ಗಮನಿಸಿದಲ್ಲಿ ಕೊಡಗಿಗೆ ಒಳಗಿನ ಶತ್ರುತ್ವದಿಂದ ಅಪಾಯ ಸಂಭವಿಸುವುದೆಂಬ ಸೂಚನೆಗಳು ಕಂಡುಬರುತ್ತಿವೆ. ಪ್ರಾಯಶಃ ಈ ಬೆಳವಣಿಗೆ ಹಲವಾರು ರೀತಿಯ ಕಾರಣಗಳನ್ನು ನೀಡಬಹುದಾದರೂ, ಕೆಲವು ಮುಖ್ಯ ಅಂಶಗಳ ಬಗ್ಗೆ ಚಿಂತನೆ ಮಾಡಬೇಕಾಗಿದೆ.

ಕೊಡಗು ಹಿಂದೆ ವಿಶಾಲ ಕೊಡಗಾಗಿದ್ದಾಗ ಇಲ್ಲಿನ ಜನರು ಸಾಮರಸ್ಯದಿಂದ ಬಾಳಿದರು ಎಂಬುದೊಂದು ಕಲ್ಪನೆಯಾಗಿತ್ತೇ ? ಸ್ವಾತಂತ್ರ್ಯ ಪೂರ್ವಕಾಲದಲ್ಲಿ ರಾಜರ ಆಳ್ವಿಕೆಯಿಂದ ಬೇಸತ್ತು ತುಳಿತಕ್ಕೊಳಗಾದವರು ಎಷ್ಟು ಮಂದಿ ? ನಂತರದ ದಿನಗಳನ್ನು ಅವಲೋಕಿಸಿದಲ್ಲಿ ಜನಜೀವನ ಹೇಗೆ ನಡೆಯುತ್ತಿತ್ತು ಎಂಬುದಕ್ಕೆ ಇತಿಹಾಸ ಪುರಾಣಗಳೇ ಸಾಕ್ಷಿ. ಈ ಬಗ್ಗೆ ಚರಿತ್ರೆಯನ್ನು ಅವಲೋಕನ ಮಾಡಿದರೆ, ಈಚಿನ ದಿನಗಳಲ್ಲಿ ಮರುಕಳಿಸಿದಂತೆ ತೋರುತ್ತವೆ. ಕಳೆದ ಹಲವಾರು ವರ್ಷಗಳಿಂದ ಜಿಲ್ಲೆಯಾದ್ಯಂತ ಒಂದಲ್ಲ ಒಂದು ಕೆಟ್ಟ ಘಟನೆಗಳು ನಡೆಯುತ್ತಲೇ ಬಂದಿದೆ. ಬಹುಶಃ ಈ ಪಿಡುಗು ಒಂದು ಸಂಸ್ಕೃತಿಯಾಗಿ ಬೆಳೆಯುತ್ತಿದೆಯೆಂದರೆ ಅತಿಶಯೋಕ್ತಿಯಾಗಲಾರದು. ಉದಾಹರಿಸುವುದಾದಲ್ಲಿ ಕೊಲೆಗಳು, ಅಪಘಾತಗಳು, ಕೋಮುಗಲಭೆಗಳು, ಮುಷ್ಕರಗಳು, ಕಳ್ಳತನದ ಪ್ರಕರಣಗಳು, ಅಪಹರಣಗಳು, ಅಪರಾಧಗಳು, ಇತ್ಯಾದಿ ಅವ್ಯಾಹತವಾಗಿ ನಡೆಯುತ್ತಿರುವುದು ಸರ್ವವೇದ್ಯ. ಈ ಎಲ್ಲಾ ಘಟನೆಗಳು ಜಿಲ್ಲೆಯಲ್ಲಿನ ನಾಗರಿಕರ ಶಾಂತಿಯನ್ನು ಕದಡಿದ್ದು ಜೀವನ ನಡೆಸುವುದೇ ದುಸ್ತರವಾಗಿದೆ.

ಒಂದು ಕಾಲದಲ್ಲಿ ಸಹಬಾಳ್ವೆಗೆ ಹೆಸರಾಗಿದ್ದ ಜಿಲ್ಲೆ ಇದೀಗ ತೀವ್ರ ರೀತಿಯ ಅನಾರೋಗ್ಯಕರ ಬೆಳವಣಿಗೆಗಳಿಂದ ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತಿದೆ. ಜಿಲ್ಲೆಯು ಸರ್ವಧರ್ಮದ ಜನರಿಂದ ಕೂಡಿರುವುದು ನಿಜ, ಮತ್ತು ಮೇಲ್ನೋಟಕ್ಕೆ ಪ್ರೀತಿ ವಿಶ್ವಾಸದಿಂದ ಕಾಣುತ್ತಾರೆ. ಆದರೆ ಮನಸ್ಸಿನಲ್ಲಿ ದ್ವೇಷದ ಭಾವನೆ ಬೆಳೆಯುತ್ತಿದೆ. ಇದಕ್ಕೆ ಕಾರಣವೇನು ? ಒಳಗೊಳಗೆ ಮುಸುಕಿನ ಗುದ್ದಾಟ ನಡೆಯುತ್ತಲೇ ಇದೆ. ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆ ಅಸ್ತವ್ಯಸ್ತವಾಗಿದೆ. ಜಿಲ್ಲೆಯ ಆಡಳಿತ ಕುಸಿಯುತ್ತಿದೆ. ಜನನಾಯಕರೆಂದು ಹೇಳಿಕೊಳ್ಳುವ ವ್ಯಕ್ತಿಗಳು ತಾವೇನು ಮಾಡುತ್ತಿದ್ದೇವೆಂಬುದನ್ನು ಮರೆತಂತಿದೆ. ಎಲ್ಲವೂ ಸ್ವಾರ್ಥಮಯವಾಗುತ್ತಿದೆ ಮತ್ತು ಸಮಾಜವನ್ನು ಬೆಳೆಸುವ ಬದಲು, ಅದರ ದೌರ್ಬಲ್ಯಗಳನ್ನು ಬಳಸಿಕೊಂಡು ತಾವೇ ಬೆಳೆಯುತ್ತಿದ್ದಾರೆ. ನಾಗರಿಕರು ಕುರಿ ಮಂದೆಗಳ ಹಾಗೆ ಆಗಿದ್ದಾರೆ ಈ ಪುಟ್ಟ ಜಿಲ್ಲೆಗೆ ಅದೆಷ್ಟು ನಾಯಕರುಗಳು ! ತುಂಬಾ ಅಡಿಗೆ ಭಟ್ಟರು ಸೇರಿ ಅಡಿಗೆ ಹಾಳು ಮಾಡಿದರಂತೆ!

ಈ ಜಿಲ್ಲೆಗೆ ಈಗ ಏನಾಗಬೇಕಾಗಿದೆ ಎಂಬುದನ್ನು ಚಿಂತಿಸುವವರು ಯಾರು ? ಎಷ್ಟು ಮಂದಿ ನಾಯಕರುಗಳಿಗೆ ಈ ಭಾವನೆಯಿದೆ ? ತಾವು ತಮ್ಮ ಬೇಳೆ ಬೇಯಿಸುವುದಕ್ಕಾಗಿಯೇ ಹೋರಾಟ ಮಾಡುತ್ತಿದ್ದಾರೆಯೆ ? ಎಲ್ಲರೂ ಗಾಂಧಿವಾದಿಗಳೇ? ಅಥವಾ ಮಹಾನ್ ಪುರುಷರುಗಳ ಆದರ್ಶ ಜೀವನದ ಬಗ್ಗೆ ಮಾತನಾಡುವವರೇ ! ಆದರೆ ತಾವು ಯಾರಾದರೂ ಈ ಮಹಾತ್ಮರ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದಾರೆಯೇ ? ಈ ನಾಯಕರುಗಳಿಗೆಲ್ಲಾ ಎಲ್ಲಾ ಜನಾಂಗದವರ ಮೇಲೆ ಪ್ರೀತಿಯೆಂಬುದಿದೆಯೇ ? ಈ ಜಾತ್ಯಾತೀತ ಎಂಬ ಪದವು ಯಾರಿಗೆ ಮತ್ತು ಯಾವುದಕ್ಕೆ ಅನ್ವಯಿಸುತ್ತದೆ ? ಹಾಗಿದ್ದಲ್ಲಿ ನಮ್ಮೊಳಗೇಕೆ ಅದೆಷ್ಟು ದ್ವೇಷದ ಭಾವನೆ ಬೆಳೆಯಬೇಕು ? ಈ ದ್ವೇಷದ ಹಿನ್ನೆಲೆಯಲ್ಲಿ ನಡೆಯಬಹುದಾದ ಹಿಂಸಾತ್ಮಕ ಘಟನೆಗಳನ್ನು ನೆನೆಪಿಸಿಕೊಳ್ಳಲು ಸಾಧ್ಯವೆ ? ಮುಂದಿನ ಪೀಳಿಗೆಗೆ ಯಾವ ರೀತಿಯ ಸಮಾಜವನ್ನು ನಿರ್ಮಾಣ ಮಾಡಲು ಬುನಾದಿಯನ್ನು ಹಾಕುತ್ತಾರೆ. ಜಾತಿ ಮತ ಭೇದಗಳಿಲ್ಲದೆ ಯಾವುದೇ ಸಭೆ ಸಮಾರಂಭ ಹಬ್ಬ ಹರಿದಿನಗಳಲ್ಲಿ ಮುಂದೆ ನಾವೆಲ್ಲಾ ಒಂದೇ ಎಂದು ಸೇರುವ ಕಾಲ ಕನಸಾಗಿ ಉಳಿಯುವುದೇ? ರಾಮರಾಜ್ಯ ಎಂಬ ಹೆಸರಿನಲ್ಲಿ ರಾವಣರೀತ್ಯಾ ಆಡಳಿತ ನಡೆಯುತ್ತಿದೆಯಲ್ಲಾ ! ಪ್ರಬಲ, ದುರ್ಬಲ ವರ್ಗಗಳ ನಡುವೆ ಏಕೆ ಈ ತಿಕ್ಕಾಟ : ಘರ್ಷಣೆ ಸಾವುಗಳು ಯಾರನ್ನು ನಂಬುವಂತಿಲ್ಲವೆ ! ಬೆಳಿಗ್ಗೆ ಹೊರಟ ವ್ಯಕ್ತಿಯು ಸಂಜೆಗೆ ಮನೆಗೆ ಮರಳುತ್ತಾನೆಂಬುದು ಏನು ಗ್ಯಾರಂಟಿ ? ಸಮಾಜದ ಹಿತ ರಕ್ಷಣೆಯನ್ನು ಮಾಡುವ ವ್ಯವಸ್ಥೆಗೆ ಅವಕಾಶವಿಲ್ಲವೆ.

ಯಾವ್ಯಾವುದೋ ಸಂಘಟನೆಗಳಿಂದ ಹುಟ್ಟಬಹುದಾದ ಪ್ರೇರಣೆಗಳಿಂದ ಕೋಮುಜ್ವಾಲೆಯು ಭುಗಿಲೇಳುವ ಸಾಧ್ಯತೆಯನ್ನು ತಳ್ಳಿ ಹಾಕಲಾಗದು. ಜಿಲ್ಲೆಯ ಪ್ರತಿಯೊಬ್ಬ ನಾಗರಿಕನೂ ಕೂಡ ಪ್ರಸ್ತಾಪದ ಬಗ್ಗೆ ಗಂಭೀರವಾಗಿ ಚಿಂತಿಸಲೇಬೇಕಾಗಿದೆ. ಬರೇ ಚಿಂತಿಸಿದರೆ ಸಾಲದಲ್ಲ. ಚಿಂತನ ಶೀಲರು, ತಮ್ಮನ್ನು ಕಲೆ ಹಾಕಿ ಒಂದು ಕಡೆ ಸೇರಿ ವಿಷಯವನ್ನು ಗಹನವಾಗಿ ಚರ್ಚಿಸುವ ವ್ಯವಸ್ಥೆಯಾಗಬೇಕು. ಕಾಲ ವಿಳಂಬವಾದಷ್ಟು ಮುಂದೊದಗಬಹುದಾದ ದುಷ್ಪರಿಣಾಮಗಳನ್ನು ಎದುರಿಸುವುದು ಹೇಗೆಂಬುದು ಒಂದು ಯಕ್ಷ ಪ್ರಶ್ನೆಯಾಗಬಹುದು. ಈಗಾಗಲೇ ಪುಟ್ಟಮಕ್ಕಳ ಮನಸ್ಸಿನಲ್ಲಿ ಭಯದ ವಾತಾವರಣ ಮೂಡಲು ಪ್ರಾರಂಭಿಸಿದೆ. ಮುಂದೆ ಇವರುಗಳ ಭವಿಷ್ಯ ಏನಾಗಬಹುದು. ಪ್ರಜಾಪ್ರಭುತ್ವವಿದೆಯೆಂದು ಹೇಳಿಕೊಳ್ಳುವ ಈ ನಾಡಿನಲ್ಲಿ ಸ್ವಾತಂತ್ರ್ಯ ಕಳೆದುಕೊಳ್ಳುತ್ತಿದ್ದೇವೆ. ಸತ್ಯ, ಅಹಿಂಸೆ ದೂರವಾಗಿದೆ. ಸ್ವಾತಂತ್ರ್ಯ ತಂದುಕೊಟ್ಟ ಮಹಾತ್ಮರಿಗೆ ಅಪಮಾನವಾಗುತ್ತಿದೆ. ಕಾನೂನು ಕಾಯಿದೆ, ನಿಯಮ, ಶಿಸ್ತು, ನೀತಿ ರೀತಿ, ತತ್ವ ಆದರ್ಶವೆಲ್ಲವೂ, ಪುಸ್ತಕದ ಬದನೆ ಕಾಯಿಯಾಗೆ ಉಳಿಯುತ್ತಿದೆ. ತಾನು ಮೇಲು, ನಾನು ಕೀಳು, ಆ ಜಾತಿ, ಈ ಜಾತಿ, ಪರಸ್ಪರ ದ್ವೇಷ ಹಿಂಸೆ ಎಂಬುದು ಎಲ್ಲಿಯ ತನಕ ನಡೆಯಬಹುದು. ಇದಕ್ಕೆ ಕೊನೆಯೆಂಬುದೇ ಇಲ್ಲವೆ ? ಪ್ರತಿಯೊಬ್ಬರೂ ತನ್ನದೇ ಆದ ರೀತಿಯಲ್ಲಿ ಮುಕ್ತ ಜೀವನ ನಡೆಸುವುದು ಹೇಗೆ ? ಈ ಬಗ್ಗೆ ಬುದ್ಧಿವಂತರು, ಚಿಂತನ ಶೀಲರು, ವಿಚಾರವಂತರು, ಸಮಾಜ ಸುಧಾರಕರು, ಒಂದೆಡೆ ಸೇರಿ ಗಂಭೀರ ಚಿಂತನೆ ಮಾಡುವುದು ಸೂಕ್ತ. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಈಗ ಮಾಡಿ ಹೋದ ತಪ್ಪುಗಳ ಕುರಿತು ಪಶ್ಚಾತ್ತಾಪ ಪಡುವುದು ನಿಶ್ಚಿತ. ಆಮೇಲೆ ಊರೇ ಬೆಂಕಿ ಹತ್ತಿ ಉರಿಯುವಾಗ ನೀರು ಹಾಯಿಸಿದರೆ ಪ್ರಯೋಜನವಾಗಬಹುದೆ? ಜನಾಂಗೀಯ ಸಂಘರ್ಷಕ್ಕೆ ಎಡೆಯಾಗದಂತಹ ವ್ಯವಸ್ಥೆಗೆ ಪ್ರಯತ್ನಿಸಲು ಸಹಕಾರ ಮನೋಭಾವದ ವ್ಯಕ್ತಿಗಳು ಜಿಲ್ಲೆಯಾದ್ಯಂತ ಸ್ಪಂದಿಸಿದಲ್ಲಿ ಮಾತ್ರ ಮುಂದೆ ಶಾಂತಿ ನೆಲೆಸೀತು.

## ಅರ್ಜಿ ಆಹ್ವಾನ

ಜಗದ್ಗುರು ಶ್ರೀ ಬಾಲಗಂಗಾಧರನಾಥ ಸ್ವಾಮಿ ಉಚಿತ ವಸತಿ ಸಹಿತ ಅಂಧರ ಶಾಲೆಯಲ್ಲಿ 1999-2000ನೇ ಸಾಲಿನ ಪ್ರವೇಶಕ್ಕಾಗಿ ಅಂಧ ಮಕ್ಕಳಿಂದ ಅರ್ಜಿ ಆಹ್ವಾನಿಸಲಾಗಿದೆ. ಶಾಲೆಯು ಜೂನ್ 1 ರಿಂದ ಆರಂಭವಾಗಲಿದೆ. ಒಂದರಿಂದ ಹತ್ತನೇ ತರಗತಿಯವರೆಗೆ ಇಲ್ಲಿ ಪ್ರವೇಶ ಪಡೆಯಬಹುದು. ಉಚಿತ ಶಿಕ್ಷಣ, ವಸತಿ, ಸಮವಸ್ತ್ರ, ವೈದ್ಯಕೀಯ ಸೌಲಭ್ಯ ನೀಡಲಾಗುವುದು.

## ಅಂಗವಿಕಲನೊಬ್ಬನ ಕುರಿತು

ಇವನೊಬ್ಬ ಅಂಗವಿಕಲ ಭಿಕ್ಷುಕ
ಅವನಿಗೆ ಅವನೇ ರಕ್ಷಕ, ಪೋಷಕ
ಇದ್ದರೇನಂತೆ ಎಲ್ಲರಂತೆ ಅವನಿಗೆ ಮಕ್ಕಳು ಮರಿ
ಅವರಿಗೆ ಅವರದೇ ಆದ ನೂರಾರು ದಾರಿ
ಹುಟ್ಟಿದ ಮಕ್ಕಳೇ ಧಿಕ್ಕರಿಸಿ ಕಣ್ಮುಂದೆ ನಡೆವಾಗ
ಆಗುವ ಇವನ ಮಾನಸಿಕ ಪಾಡು ನಿಜಕ್ಕೂ
ಅರ್ಥೈಸಲಾರದ ಜೀವನದ ದುರಂತ ಶೋಕದ ಹಾಡು
ದಾರಿ ಹೋಕರೋ... ಕಣ್ಣಿಗೆ ಕತ್ತಲೆ ಕಟ್ಟಿಸುವಷ್ಟು
ನೂರಾರು... ಸಾವಿರಾರು
ಅವರಲ್ಲಿ ಬರೀ ಕಣ್ಣೋಟವನ್ನಾದರು ಕೊಡುವವರೋ
ಬರೀ ಬೆರಳೆಣಿಕೆಯವರು
ಕೈಚಾಚಿ ಕೊಡುವುದ ಹೋಗಲಿ, ಕೈಚಾಚಿ
ಮೈದಡವಿ ಸಂತೈಸುವ ಉದಾರಿಗಳು ಬಹು ವಿರಳ
ಆದರೂ ...ಒರಟು ಹೃದಯಿಗಳ ಪೊಳ್ಳು ಅನುಕಂಪದ
ಮಾತು ಕಿವಿಗಪ್ಪಳಿಸುವುದು ಹೇರಳ
ಸರಳತೆಯಲಿ ನುಡಿಯಬೇಕೆಂದರೆ, ಬರಲಾರದು
ಯಾರಿಗೂ ಇಂತಹ ದುರ್ಗತಿ
ಜೀವ ನೆಟ್ಟಗಿದ್ದರೆ ಉಂಟು, ಬಂಧು ಬಳಗ
ಅಡಕವಾಗಿದೆ ಇದರಲ್ಲೇ ಜೀವನದ ಸ್ಥಿತಿಗತಿ.

● ಸ್ಮಿತಾ ಪಳಂಗಾಯ, ಸುಳ್ಯ.

## ನಗೆಹನಿ

ಗ್ರಾಹಕ : ಅಂಗಡಿಯಲ್ಲಿ ಇಷ್ಟು ಸಣ್ಣ ಹುಡುಗ ಕುಳಿತಿದ್ದಿಯಲ್ಲ?
ಹುಡುಗ : ಇಲ್ಲ, ನಮ್ಮ ತಂದೆ ಊಟಕ್ಕೆ ಹೋಗಿದ್ದಾರೆ.
ಗ್ರಾ : ಹಾಗಿದ್ರೆ ನಿನಗೆ ಚಾಕಲೇಟು ತಿನ್ನಲು ಒಳ್ಳೆಯದಲ್ಲವೆ?
ಹು : ಇಲ್ಲಾ, ಚಾಕಲೇಟು ತಿಂದರೆ ತಂದೆಗೆ ಗೊತ್ತಾಗುತೆ. ಅದಕ್ಕೆ ಅದನ್ನು ನೆಕ್ಕಿ ಅಲ್ಲೇ ಇಟ್ಟುಬಿಡುತ್ತೇನೆ.

● ಎಂ. ಸತೀಶ್ [P.H] ಮಹದೇವಪುರ.

ಈ ವರ್ಷದಿಂದ ಶಾಲೆಯಲ್ಲಿ ಕೈಗಾರಿಕಾ ತರಬೇತಿ ನೀಡುವ ಯೋಜನೆಯನ್ನೂ ಹಾಕಿಕೊಳ್ಳಲಾಗಿದೆ. ಹೆಚ್ಚಿನ ವಿವರಗಳಿಗೆ ಜಗದ್ಗುರು ಶ್ರೀ ಬಾಲಗಂಗಾಧರನಾಥ ಸ್ವಾಮಿ ಅಂಧರ ಉಚಿತ ವಸತಿ ಸಹಿತ ಶಾಲೆ, ಅರ್ಚಕರ ಹಳ್ಳಿ, ರಾಮನಗರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ [ದೂರವಾಣಿ 08113 – 71674] ಇಲ್ಲಿ ಸಂಪರ್ಕಿಸಲು ಪ್ರಕಟಣೆ ಕೋರಿದೆ.

[ 3ನೇ ಪುಟದಿಂದ ಮುಂದುವರಿದುದು]

ಪಡೆದ ಪ್ರತಿಯೊಬ್ಬರ ಕರ್ತವ್ಯವಾಗಿದೆ. ಇವರು 1929ರಲ್ಲಿ ಕಟ್ಟಿಸಿದ ಕೋರಂಗಾಲ ಗ್ರಾಮದ ಪ್ರಾಥಮಿಕ ಶಾಲೆಗೆ ದಿ॥ ನಂಗಾರು ಮುತ್ತಣ್ಣ ಸರ್ಕಾರಿ ಪ್ರಾಥಮಿಕ ಶಾಲೆಯೆಂದು ಪುನಃ ನಾಮಕರಣ ಮಾಡಿ ಸತ್ತವರ ಆತ್ಮಕ್ಕೆ ಶಾಂತಿ ಬಯಸು ವುದು ಕಿರಿಯರ ಆದ್ಯ ಕರ್ತವ್ಯವಾಗಿದೆ. ಮಕ್ಕಳ ಉದ್ಧಾರ ಕ್ಕಾಗಿ, ಶಾಲಾ ಸ್ಥಾಪನೆಗಾಗಿ, ಶ್ರೇಯೋಭಿವೃದ್ಧಿಗಾಗಿ ದುಡಿದ ಮಹಾನುಭಾವರ ಹೆಸರನ್ನು ಹಾಕುವುದರಲ್ಲಿ ಯಾವ ತಪ್ಪು ಗಳು ಇರುವುದಿಲ್ಲ ಈ ತೆರನಾಗಿ ಕರ್ನಾಟಕದ ಇತರೆಡೆಗಳಲ್ಲಿರುವ ಶಾಲೆಗಳೇ ಸಾಕ್ಷಿಯಾಗಿದೆ. ಇದನ್ನು ಸಂಗಾತಿ ನಾಡಿನ ಜನತೆ ಯಿಂದ ಆಶಿಸುತ್ತದೆ.

ಮುತ್ತಣ್ಣನವರ ತಾಯಿ ನಂಜಮ್ಮನವರು ಕ್ಯಾಚಪ್ಪನ ಮನೆತನದವರು. ನಂಜಮ್ಮನವರು 7ನೇ ತಿಂಗಳು ಗರ್ಭವತಿ ಯಾಗಿದ್ದಾಗ ತನ್ನ ಗಂಡ ಮಾಲಿಂಗನವರನ್ನು ಕಳೆದು ಕೊಂಡು ಇಡೀ ಸಂಸಾರವೇ ಕೂಡು ಅಡುಗೆಯಲ್ಲಿದ್ದಾಗ ತಬ್ಬಲಿಯಾಗಿ ಬೆಳೆದರು. ಮುತ್ತಣ್ಣನವರ ಹೆಂಡತಿ ಗೌರಮ್ಮ ಕುರುಂಜಿ ಮನೆತನದಿಂದ ಬಂದವರು.

ಇವರ ಮಗ ಅಪ್ಪಾಜಿಯವರು ಭಾರತೀಯ ವಾಯು ದಳದಲ್ಲಿ ಮಾಸ್ಟರ್ ವಾರೆಂಟ್ ಆಫೀಸರ್ ಆಗಿ ನಿವೃತ್ತರಾಗಿ, ಕಿರ್ಲೋಸ್ಕರ್ ಕಂಪನಿಯಲ್ಲಿಯೂ ಸಹ ದುಡಿದು ಈಗ ಬೆಂಗ ಳೂರಿನ ಗಂಗಾನಗರದಲ್ಲಿ ವಾಸವಾಗಿದ್ದಾರೆ. ಮುತ್ತಣ್ಣನವರ ಮೊಮ್ಮಗ ಡಾ॥ ಎನ್. ಎ. ಸುಧಾಕರ್, M.S. DOMS. ಬೆಂಗಳೂರಿನಲ್ಲಿ ಜನಿಸಿ, ಸುಳ್ಯದ ಕೆ.ವಿ.ಜಿ. ಕಣ್ಣಾಸ್ಪತ್ರೆಯಲ್ಲಿ ತಜ್ಞರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಹಾಗೂ ಇನ್ನೊಬ್ಬ ಮೊಮ್ಮಗ LT. CDR. ಎನ್. ಎ. ವಿನೋದ್ B.E. ತನ್ನ ತಂದೆಯಂತೆಯೇ ಭಾರತೀಯ ನೌಕಾಪಡೆಗೆ ಸೇರಿ ನ್ಯೂಕ್ಲಿಯರ್ ಸಬ್‌ಮೆರಿನ್ ಆಫೀಸರ್ ಆಗಿ ಪ್ರಸ್ತುತ ರಷ್ಯಾದ ಉತ್ತರ ಭಾಗದಲ್ಲಿರುವ ಸೀಕ್ರೆಟ್ ತಂಗುದಾಣದಲ್ಲಿ ತರಬೇತಿ ಯನ್ನು ಪಡೆಯುತ್ತಿದ್ದಾರೆ. ಇವರ ಪತ್ನಿ ಡಾ॥ ಸುಮಾರಾಣಿ ಯವರು ಪತಿಯ ಜೊತೆಯಲ್ಲಿಯೇ ವಾಸವಾಗಿದ್ದಾಳೆ. ಇವರಿಗೆ ಹಿರಿಯರ ಆಶೀರ್ವಾದ ಅಲ್ಲದೆ ಕುಲಗುರು ವೆಂಕಟರಮಣನ ಕೃಪಾಕಟಾಕ್ಷೆಯಿಂದ ತನ್ನ ಕರ್ತವ್ಯದಲ್ಲಿ ಅತ್ಯುನ್ನತ ಪದವಿ ಗೇರಿ ನೌಕಾದಳದ ಮುಖ್ಯಸ್ಥನಾಗಿ ಜನಾಂಗದ ಕೀರ್ತಿಯನ್ನು ಎತ್ತಿಹಿಡಿಯುವಲ್ಲಿ ಸಫಲರಾಗಲಿ ಎಂದು ಸಂಗಾತಿ ಮನಸಾರೆ ಆಶಿಸುತ್ತದೆ. ●

—ಸಂಗಾತಿ ವರದಿ

## ನಗೆಹನಿ : ಪಜಿಲ್

ಕಥೆ ಓದುವುದು, ಪೇಪರ್ ಓದುವುದು, ಜಾಹೀರಾತು ನೋಡುವುದು ಹೀಗೆ ಎಲ್ಲರಿಗೂ ಒಂದೊಂದು ರೀತಿಯ ಹವ್ಯಾಸ ವಿದೆಯಲ್ಲವೆ. ಹಾಗೆ ನನಗೂ ಒಂದು ಹವ್ಯಾಸವಿದೆ ಅದೇನೆಂದರೆ ವಿಪರೀತವಾದ ಪಜಿಲ್ಸ್ ಹುಚ್ಚು. ಒಂದು ದಿನ ಪತ್ರಿಕೆಯಲ್ಲಿ ಒಂದು ಪಜಿಲ್ ಬಗ್ಗೆ ಪ್ರಕಟಣೆ ಇತ್ತು. ನೀವು ಕತ್ತಲಿನಲ್ಲಿ ಸಹಿತ ನೋಡಬೇಕೆಂದುಕೊಂಡರೆ ಈ ಪಜಲನ್ನು ಪೂರ್ತಿ ಮಾಡಿ. ನೂರು ರೂಪಾಯಿ ಎಂ. ಓ ಮಾಡಿ. ನೀವು ಕತ್ತಲಿ ನಲ್ಲಿ ನೋಡುವ ಸಾಧನ ನಿಮಗೆ ಬಂದು ಸೇರುತ್ತದೆ. ಈ ಪಜಿಲ್ ಪೂರ್ತಿ ಮಾಡಿದವರಿಗೆ ಮಾತ್ರವೇ ಈ ಅವಕಾಶ. ಆ ಪ್ರಕಟಣೆ ಓದಿ ತುಂಬಾ ಉತ್ಸಾಹದಿಂದ ಪಜಿಲ್ ಪೂರ್ತಿ ಮಾಡಲು ಆರಂಭಿಸಿದೆ. ಹತ್ತು ನಿಮಿಷದಲ್ಲಿ ಪಜಿಲ್ ಪೂರ್ತಿ ಮಾಡಿದೆ. ಮರುದಿನ ತಾಯಿಯಲ್ಲಿ ಕಾಡಿ ಬೇಡಿ 100 ರೂ. ಪಡೆದು ಪಜಿಲ್ ಪ್ರಕಟಣೆಯ ವಿಳಾಸಕ್ಕೆ ಕಳುಹಿಸಿದೆ. ಆಮೇಲೆ ನನಗೆ ಇಡೀ ರಾತ್ರಿ ನಿದ್ರೆ ಬರಲಿಲ್ಲ. ಕತ್ತಲಿನಲ್ಲಿಯೂ ಸಹ ನೋಡಬಲ್ಲ ಆ ಸಾಧನ ಹೇಗಿರಬಹುದೆಂದು ನನ್ನ ಮನ ತಪಿಸು ತ್ತಿತ್ತು. ಕತ್ತಲಿನಲ್ಲಿ ತಾನು ಓದುವಂತಾದರೆ ಆಹಾ ! ಎಷ್ಟೊಂದು ಖುಷಿ ನೀವೆ ಯೋಚಿಸಿ. ಹತ್ತು ದಿನಗಳ ನಂತರ ನನಗೊಂದು ಪಾರ್ಸಲ್ ಬಂತು. ಪೋಸ್ಟೇಜ್ ಸಹಿ ಮಾಡಿ ಪಾರ್ಸಲ್ ತಗೊಂಡು ಮನೆಗೆ ಓಡಿ ಬಂದೆ. ಅದರಲ್ಲಿ ಅತಿ ಅಗ್ಗದ ಪೆನ್ನು, ಟಾರ್ಚ್ ಒಂದು ಕಾಗದ ಇತ್ತು. ಕಾಗದ ತೆಗೆದು ಓದಿದೆ. ಅದರ ಸಾರಾಂಶ ಹೀಗಿತ್ತು. ಪಜಿಲ್ ಅಚ್ಚುಕಟ್ಟಾಗಿ ತಪ್ಪಿಲ್ಲದೆ ಪೂರ್ತಿ ಮಾಡಿದ ನಿಮ್ಮ ಬುದ್ಧಿ ವಂತಿಕೆಯನ್ನು ಅಭಿನಂದಿಸುತ್ತೇವೆ ಎರಡು ಸೆಲ್ ತಗೊಂಡು ಇದರಲ್ಲಿ ಕಳುಹಿಸಿರುವ ಟಾರ್ಚ್ ಲೈಟ್‌ನಲ್ಲಿ ಹಾಕಿ ನೀವು ಅದ್ಭುತವಾಗಿ ಕತ್ತಲಲ್ಲಿ ಸಹ ನೋಡಬಲ್ಲಿರಿ ಎಂದಿತ್ತು. ಅದನ್ನು ಓದಿ ನನಗೆ ಸುಸ್ತೋ ಸುಸ್ತು.

— ಕೆ ಎ. ಶಿವಪ್ಪ, ಗಾಳಿಬೀಡು.

## ಘನ ಹರಿಸೇವೆ

ಭಾಗಮಂಡಲನಾಡು, ಚೇರಂಬಾಣೆ ಸಮೀಪವಿರುವ ಬಿ ಬಾಡಿಗ ಗ್ರಾಮದ ನಡುಬೆಟ್ಟೀರ ಮನೆತನದ ಐನ್ ಮನೆ ಯಲ್ಲಿ ದಿನಾಂಕ 24-4-99ರ ಸಂಜೆ 6 ಗಂಟೆಗೆ ಶ್ರೀ ಕುಲಗುರು ವೆಂಕಟರಮಣಸ್ವಾಮಿಯ ಘನ ಹರಿಸೇವೆ ನಡೆಯ ಲಿರುವುದಾಗಿ ತಿಳಿದುಬಂದಿದೆ. ಭಕ್ತಾದಿಗಳು ಆಗಮಿಸಿ ಪ್ರಸಾದ ಸ್ವೀಕರಿಸುವಂತೆ ಕೋರಲಾಗಿದೆ.

ವರದಿ : ಷರಿ, ಸೆಟ್ಟೇಜನ

# ನಿಮ್ಮ ಪತ್ರಗಳು

## ಒಗ್ಗೂಡಿದ ಹುಮ್ಮಸ್ಸು ಬತ್ತದಿರಲಿ

ಮಾನ್ಯರೆ,

ಈಗ ಒಂದು ತಿಂಗಳ ಹಿಂದೆ ಪ್ರಕಟವಾದ ಕೊಡಗು ಸಂಗಾತಿಯ ಸಂಪಾದಕರಿಗೆ ಶ್ರೀ ತೆಕ್ಕಡ ಕುಮಾರ್ ಮುತ್ತಾರ್ಮುಡಿ ಇವರು ಬರೆದ ಪತ್ರವನ್ನು ಓದಿ ಅವರ ವ್ಯಕ್ತಿಗತ ಹಾಗೂ ಗೌಡ ಸಾಂಸ್ಕೃತಿಕ ಕಲಾವಿದರ ಪರವಾಗಿ ಬರೆದ ಲೇಖನ ನಿಜವಾಗಿಯೂ ಸತ್ಯಸಂಗತಿಯಾಗಿದೆ. ಸಾಂಸ್ಕೃತಿಕ ವಿಷಯ, ಸಾಹಿತ್ಯ ಹಾಗೂ ಪತ್ರಿಕೆಯನ್ನು ಹೊರಡಿಸುವ ಕಾರ್ಯಕ್ರಮಗಳು ಹಣ ಸಂಪಾದನೆಯ ದಾರಿಯೇ ಅಲ್ಲ.

ಆದ್ದರಿಂದಲೇ ನಾನು ಒಂದೆರಡು ಲೇಖನಗಳನ್ನು ಈ ಹಿಂದೆ ಬರೆದು ಮಡಿಕೇರಿಯ ಗೌಡ ವಿದ್ಯಾಸಂಘ, ಗೌಡಸಮಾಜ ಕೊಡಗು ಗೌಡ ಸಾಂಸ್ಕೃತಿಕ ಅಕಾಡಮಿ, ಅರೆಭಾಷಿಕ ಅಕಾಡಮಿ ಹಾಗೂ ಗೌಡ ಮಹಿಳಾ ಸಂಘಟನಾ ಸಂಸ್ಥೆ ಒಂದುಗೂಡಿ ಒಂದು ಮನೆಯ ಆಶ್ರಯದಲ್ಲಿ ಇರಬೇಕು. ಇವುಗಳ ಹಣವನ್ನು ಕ್ರೋಢಿಕರಿಸಿ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರದರ್ಶಿಸುವ ಕಲಾವಿಧರಿಗೆ, ಈ ಸಂಘ ಸಂಸ್ಥೆಗಳ ಹಾಗೂ ಸಮಸ್ತ ವಿಷಯಗಳನ್ನು ಸಂಗ್ರಹಿಸಿ ಪ್ರಕಟಿಸುತ್ತಿಸುತ್ತಿರುವ ಕೊಡಗು ಸಂಗಾತಿಯಂತಹ ಪತ್ರಿಕೆಗೆ ಧನಸಹಾಯ ಮಾಡಿದರೆ ಮಾತ್ರ ಈಗ ಎರಡು ಮೂರು ವರ್ಷಗಳಲ್ಲಿ ಅಲ್ಲಲ್ಲಿ ಪ್ರದರ್ಶಿಸಲ್ಪಡುವ ಸಾಂಸ್ಕೃತಿಕ ಕಾರ್ಯಕ್ರಮಗಳು ಇನ್ನು ಮುಂದಕ್ಕೂ ಮುಂದುವರಿದುಕೊಂಡು ಹೋಗಲು ಸಾಧ್ಯವಾದೀತು. ಇದರ ಜೊತೆಯಲ್ಲಿ ಈಗಾಗಲೇ ಶ್ರೀ ಅನ್ಮಾಜಿರ ಪೊನ್ನಪ್ಪ ಹಾಗೂ ಶ್ರೀ ಹೊದ್ದೆಟ್ಟಿ ಭವಾನಿಶಂಕರ್ ರವರು ತಯಾರಿಸಿದ ಪೊನಿಧ್ವನಿ ಬರೆ ಗೌಡರಲ್ಲಿ ಮಾತ್ರವಲ್ಲದೆ ಹುತ್ತರಿಯ ಕೋಲಾಟದ ಹಾಡನ್ನು ಹಾಡಿ ಶಾಲೆಗಳ ವಾರ್ಷಿಕೋತ್ಸವದ ಮನರಂಜನೆಯ ಕಾರ್ಯಕ್ರಮಗಳಲ್ಲಿ ಹಾಡಿ ಕುಣಿದಾಡುತ್ತಿದ್ದಾರೆಂಬುದನ್ನು ಕೇಳಿ ನನಗೆ ತುಂಬ ಸಂತೋಷವಾಯಿತು. ಇದೆಲ್ಲಾ ನಮ್ಮ ಜನರಲ್ಲಿ ಹುದುಗಿ ಹೋಗಿದ್ದ ಚೈತನ್ಯ ಹೊರ ಹೊಮ್ಮಿದಂತಾಯಿತಲ್ಲವೇ ?

ಆದುದರಿಂದ ಎಲ್ಲ ಸಂಘ ಸಂಸ್ಥೆಗಳವರಲ್ಲಿ ಕೇಳಿಕೊಳ್ಳುವುದೇನೆಂದರೆ ತಾವೆಲ್ಲಾ ಒಟ್ಟುಗೂಡಿ ಗೌಡ ಜನಾಂಗದ ಯುವಕ ಯುವತಿಯರಲ್ಲಿ ಉದ್ಭವಿಸಿರುವ ಈ ಹುಮ್ಮಸ್ಸಿನ ಚಿಲುಮೆ ಬತ್ತಿಹೋಗದಂತೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

—ಪೂಜಾರಿರ ಮೊಣಪ್ಪ, ಬೆಂಗಳೂರು.

## ಕೀರ್ತಿ ಪತಾಕೆ ಉತ್ತುಂಗಕ್ಕೇರಲಿ

ಮಾನ್ಯರೆ,

ನಮ್ಮ ಕುಟುಂಬಕ್ಕೆ ತುಂಬಾ ಹತ್ತಿರವಾಗಿರುವ ಶ್ರೀ ಜಯಪ್ರಕಾಶ್ ಅವರ ಬಗ್ಗೆ ಬಂದ ಲೇಖನ ಪ್ರಶಂಸಾರ್ಹವಾದುದು. ಇವರೊಬ್ಬ ನಿಷ್ಪಕ್ಷಪಾತಿ. ಕುಗ್ರಾಮವಾಗಿದ್ದ ಚೆಂಬುಗ್ರಾಮವನ್ನು ಮಾದರಿ ಗ್ರಾಮವಾಗಿ ಪರಿವರ್ತಿಸಲು ಶ್ರೀಯುತರು ಪಡುತ್ತಿರುವ ಶ್ರಮ ಅಪಾರ. ಮೇಲಾಗಿ ನಾನು ಪ್ಯಾರಾ ಮಿಲಿಟರಿಗೆ ಆಯ್ಕೆ ಆಗಿ ಸೇವೆಗೆ ಸೇರಬೇಕಾಗಿರುವ ದಿನ ಬಂದರೂ, ದಾಖಲಾತಿಗಳಿಗೆ ಜಿಲ್ಲಾಧಿಕಾರಿಗಳ ಸಹಿ ಆಗಿರಲಿಲ್ಲ. ಕೊನೆಯದಿನ ಆಪದ್ಬಾಂಧವನಂತೆ ತಮ್ಮ ಖರ್ಚಿನಲ್ಲೇ ಮಡಿಕೇರಿ ವರೆಗೆ ಬಂದು ಸಹಿ ದೊರಕಿಸಿಕೊಟ್ಟು, ನನಗೆ ಭಾರತ ಮಾತೆಯ ಸೇವೆ ಮಾಡುವ ಅವಕಾಶ ಕಲ್ಪಿಸಿಕೊಟ್ಟ ಮಹಾನುಭಾವ. ಅವರಿಗೆ ನಾನು ಚಿರಋಣಿ. ಕುಲದೇವರಾದ ವೆಂಕಟರಮಣ ಮತ್ತು ಕಾವೇರಿಮಾತೆಯ ಆಶೀರ್ವಾದವಿರಲಿ. ಗೌಡ ಜನಾಂಗದ ಕೀರ್ತಿಪತಾಕೆ ಇವರ ಮೂಲಕ ಉತ್ತುಂಗಕ್ಕೇರಲಿ.

—ತೀರ್ಥಪ್ರಕಾಶ್ ಅರಂಬೂರು, ಚೆನ್ನೈ.

## ಚಿರಂಜೀವಿಯಾಗಿ ಬೆಳಗಲಿ

ಮಾನ್ಯರೆ,

"ಪ್ರಾಯ ಬಾಕನ ನಾಯಿ ಸ ಲಾಯ್ಕು ಕಂಡದ್'ತ ಅರೆಭಾಷೆ ಗಾದೆ. ಆದರೆ ನಮ್ಮ ಕೊಡಗು ಸಂಗಾತಿ ಹಂಗೆ ಆಕಾಗದ್. ಅವು ಈಗ ಮೂರ್‌ನೇ ವರ್ಷದ ಸಣ್ಣ ಕೂಸು. ಮುಂದೆ ಒಂದ್ ದಿನ ಪ್ರಾಯಕ್ಕೆ ಬಂದದೆ. ಆದರೆ ಇವು ಯಾಗೋಳ್ ಲಾಯ್ಕು ಕಂಡ್, ಚಿರಂಜೀವಿಯಾಗಿ ನಮ್ಮೆಲ್ಲರ ಬೆಳ್‌ಕಾಗಿ ಬೆಳ್‌ಗಲಿತ ನಾನ್ ಹಾರೈಸಿನೆ.

—ನಂಗಾರ್ ಕಿರಣ್ ಕೀರ್ತಿಪ್ರಸಾದ್,
ಯಡವಾರೆ ಗ್ರಾಮ.

## ಧನ್ಯವಾದಗ

ಮಾನ್ಯರೆ,

ಸಂಚಿಕೆ 5ಲ್ ಶ್ರೀ ಬಾಚರಣಿಯಂಡ ಅಪ್ಪಣನವು ಬರ್ದ 'ನಾನ್ ಅಂಜಾಣ ಹಾಕಿದ್'' ಲೇಖನ ತುಂಬಾ ಸೊಗಸಾಗಿ ಬಂದುಟ್ಟ್. ನಮ್ಮ ಜನಾಂಗದವು ಬರೆಯೋದಕ್ಕಿಂತ ಗೌಡ ವೇತ್‌ರಗ ಬರೆಯುವ ಲೇಖನ ತುಂಬಾ ಮನಮುಟ್ಟುತಲುಟ್ಟು ಇವು ಭಾಷಾಭಿಮಾನಂದ ಬರೆಯುವು ಕಾಡದೆ. ನಮ್ಮವುಕೆ ಅರೆಭಾಷೆ ಮಾತಾಡಿಕೆ ನಾಚಿಕೆ ಕೀಳರಿಮೆಯಾದೆ, ಗೌಡವೇತರ್ ಗಳಿಗೆ ಭಾಷಾಭಿಮಾನ ಇರ್ದ ನಿಜಕ್ಕೂ ಖುಶಿ ಇಂತವರ ಪರಿಚಯನ ಸಂಗಾತಿ ಓದುವುಕೆ ನೀಡ್ದ್ ಸಂತೋಷ.

—ಕು|| ರಜನಿ ಕಾಳಪ್ಪ, ಅಸ್ಸಾಂ ತೇಜಪುರ.

# ಕರಿ ಚಿನ್ನ

## ಧಾರಾವಾಹಿ-24

ಮೂಲಕಥೆ : ಅಶ್ವಥಿ ಅರವಿಂದ್
ಅರೆಭಾಷೆಗೆ : ಎಂ.ಇ. ಮುಹಮ್ಮದ್

ಕಳ್ದ ಸಂಚಿಕೆಂದ............

ಜೀವನ್ ಸುಡ್ಕುಳಿಂದ ಕಾರ್‌ಲಿ ವಿೂರನ ಕರ್ಕಂಡ್ ಬಂದ್ ಬೋರ್‌ಗುಡ್ಡೆ ಜಂಕ್ಷನ್ಲಿ ಬುಟ್ಟ್ ಹೋತ್. ಜೀವನ್ ಮನೆಗೆ ಬಾಕನ ಎಲ್ಲವೂ ಚಿಂತೆಲಿ ಕುದ್ದೊಳೊ. ದೇವಯ್ಯ ಮಾತ್ರ ಬ್ಯಾಜಾರಲಿ ವಿಸ್ಕಿ ಕುಡಿತಾ ಪ್ಲಾನ್ ಹಾಕ್ತಿತ್ತ್. ತನ್ನ ರೌಡಿಗಳ್ನ ಕರ್ದ್ ಚಂಗುಮಣಿನ ಹುಡ್ಕಿ ಎಳ್ಕಂಡ್ ಬನ್ನಿತ ಹೇಳ್ದ್. ಇಲ್ಲಿ ಪೊಲೀಸ್‌ನವು ಸೋಮಯ್ಯನ ಮತ್ತೆ ನೀಲುನ ಸ್ಟೇಷನ್ಲಿ ಎನ್‌ಕ್ವಯಿರಿ ಮಾಡ್ತಾ ಇದ್ದವೆ.

ಮುಂದೆ ಓದಿ............

'ಬೋರ್‌ಗುಡ್ಡೆ ದೇವಯ್ಯನ ಮಂಜಿನ ಚಾಕ್‌ಲಿ ಒಂದೇ ಕುತ್ತಟಕ್ಕೆ ಕೊಂದ ಧೀರ ಗೂಡೆ ತಾನೆ ನೀನ್ ? ಬಲಗಾಲ್ ಒಳಗೆ ಮಡ್ಗಿ ಬಾ. ನಾವೆಲ್ಲ ಸೇರಿಬುಟ್ಟ್ ನಿಂಗೆ ಇಂದ್ ಒಂದು ಡಿನ್ನರ್ ಕೊಟ್ಟವೆ.'

ನೀಲು ಹೆದ್ರಿ ನಡ್ಗಿತ್. ಪಾಸಿಗೆ ಕೊಡಿಕೆ ಎಳ್‌ಕಂಡ್ ಹೋಗೊ ಅಪರಾಧಿನಂಗೆ ಹೆದ್ರಿಕಂಡೇ ಅವು ಜೀಪ್‌ಂದ ಇಳ್ತ್.

ಗಾಳಿಮರ ಸೋಮಯ್ಯನ ಮಗಳ್ನ ನೋಡಿ ಸ್ಟೇಷನ್ ಮುಂದೆ ನಿಂತಿದ್ದ ಸೆಂಟ್ರಿ ಜೊಲ್ಲು ಸುರ್ಸಿತ್.

ರೈಟ್ರ್ ರಮಣ ಪೆನ್ನ್‌ನ ಟೇಬಲ್ ಮೇಲೆ ಮಡ್ಗಿ ಕಾನ್‌ಸ್ಟೇಬಲ್ ಕಾಳುನ ಕಡೆಗೆ ನೋಡಿ ಕಣ್ಣ್ ಹೊಡ್ತ್.

ಸರ್ಕಲ್ ಇನ್‌ಸ್ಪೆಕ್ಟರ್ ಪ್ರಭುದಾಸ್ ಮತ್ತೆ ಎಸ್. ಐ. ರಾಮಮೂರ್ತಿ ಬೇಕಾದಂಗೆಲ್ಲಾ ಎನ್‌ಕ್ವಯಿರಿ ಮಾಡ್ದೊ.

'ನಂಗೆ ಒಂದೂ ಗೊತ್ಲೆ ಸಾರ್. ನೀವ್ ನನ್ನ ಕೊಂದರೂ ಸರಿ. ಇದ್ಕಿಂತ ಹೆಚ್ಚಿಗೆ ಹೇಳಿಕೆ ನನ್ನಲ್ಲಿ ಏನೂ ಇಲ್ಲೆ ಸಾರ್'

'ಅಚ್ಯುತಾ ಇವನ ಎಳ್‌ಕಂಡ್ ಹೋಗಿ ಲಾಕಪ್ ಒಳಗೆ ಹಾಕ್'

ಸರ್ಕಲ್ ಇನ್‌ಸ್ಪೆಕ್ಟರ್ ಹೇಳ್ತ್.

ಸೋಮಯ್ಯ ಎಲ್ಲಾದೇವರ ಮೇಲೆ ಆಣೆ ಹಾಕಿ ಹೇಳ್ತ್.

ಅಚ್ಯುತ ಸೋಮಯ್ಯನ ಎಳ್‌ಕಂಡ್ ಲಾಕಪ್ ಕಡೆಗೆ ಹೋತ್. ಸೋಮಯ್ಯನ ಕಬ್ಬಿಣದ ಬಾಗ್ಲ ತೆಗ್ದ್ ಒಳಗೆ ದೂಡಿ ಬುಟ್ಟತ್, ಆ ರಭಸಕೆ ಗಾಳಿಮರದ ಸೋಮಯ್ಯನ ತಲೆ ಗೋಡೆಗೆ ಬಡ್ತ್. ಅಂವ ಬ್ಯಾನೆ ಸಹಿಸ್ಟೆ ಮರ್ಪ್ಟ ಬುಟ್ಟತ್. ಆರ್ಡರ್ಲಿ...

'ಅವ್ವಾ ನನ್ನ ಕೊಂದ್ ಬುಟ್ರೋ! ಅವ್ವಾ...ಅಪ್ಪಾ...ನನ್ನ ಸಾಯಿಸ್ತಾ ಒಳೋ...'

ನೀಲು ಜೋರಾಗಿ ಮರ್ಗ್ದದು ಕೇಳಿಸ್ತ್.

ತಲೆಗೆ ಆದ ಗಾಯುನ ಮರ್ತ್ ಸೋಮಯ್ಯ ಹೇಳ್ತ್.

'ಸಾರ್ ನನ್ನ ಮಗಳ್ನ ಏನೂ ಮಾಡ್ಬೇಡಿ ನನ್ನ ಕೂಸ್‌ನ ಬುಟ್ಟ್‌ಬುಡಿ, ಅವ್ಳಿಗೆ ಕೊಡೊ ಶಿಕ್ಷೆನ ನಂಗೆ ಕೊಡಿ ಸಾರ್.'

'ಬಾಯಿ ಮುಚ್ಕಂಡ್ ಕುದ್ದಿಯಾ ಅಲ್ಲ ಒದ್ದ್ ನಿನ್ನ ಸೊಂಟ ಮುರಿಯೊಕಾ ?'

ಒಬ್ಬ ಪೊಲೀಸ್ ಕಾನ್‌ಸ್ಟೇಬಲ್ ಕೇಳ್ತ್.

'ಅಯ್ಯೋ ವೆಂಕಟ್ರಮಣ ಸ್ವಾಮಿ, ನಂಗೆ ಸಹಿಸಿಕೆ ಆದ್‌ಲೆಲ್ಲಪ್ಪಾ, ನಂಗೆ ಗೊತ್ತ್‌ಲೆ ದೇವಾ ಯಾರ್ ಕೊಂದದ್‌ಂತ'

ಆಪ್ಸರ್ಲಿ ಅವಳ ಬಾಯಿಗೆ ಅಡ್ಡ ಕೈ ಇಟ್ಟಂಗೆ ಅವಳ ಸದ್ದ್ ನಿತ್ತ್ ಹೋತ್.

ಸೋಮಯ್ಯ ಕಬ್ಬಿಣದ ಬಾಗಲ್‌ಗೆ ತಲೆನ ಬಡ್ಕಂಡ್ ದೇವುರ್ನ ಕರ್ತ್.

ನಾನ್ ಕೊಟ್ಟೂರ್ ಮೊದ್ಲೆಗೆ ಹೋದು ಬ್ಯಾಡಾಗಿತ್ತ್. ಕಳ್ಪ್ ಮಾಸ ತಿನ್ನದೇ ಕುಡಿಯದೇ ಹೋದ್ರೂ ಆಗ್ತಿತ್ತ್. ಹಾಳಾದ ಆಸೆ ನನ್ನ ಈ ಸ್ಥಿತಿಗೆ ತಂದಾಕಿತಲ್ಲ ದೇವಾ...?

* * *

ಮಾರಣೇ ದಿನ ಬೆಳಿಗ್ಗೆ ಬೋರ್‌ಗುಡ್ಡೆ ದೇವಯ್ಯ ತನ್ನ ರೌಡಿಗಳ ಕರ್ದ್ ಚಂಗುಮಣಿನ ಕೊಲ್ಲಿಕೆ ಪ್ಲಾನ್ ಹೇಳಿಕೊಟ್ಟ್ ಕಳ್ಸಿತ್.

ಫೋನ್ ಸದ್ದ್ ಕೇಳ್ತ್.

'ಹಲೋ'

'ದೇವಯ್ಯಣ್ಣಾ ..?'

ಸಬ್‌ಇನ್‌ಸ್ಪೆಕ್ಟರ್ ರಾಮಮೂರ್ತಿದ್ ಫೋನ್.

'ಹೌದ್ ಮಾರಾಯ ನಾನೇ ಈಗಳೂ ನನ್ನ ಹೆಸ್ರ್ ದೇವಯ್ಯಂತ್‌ಲೇ'

ಒಂದ್ ಗುಡ್‌ನ್ಯೂಸ್ ಹೇಳಿಕೆ ಫೋನ್ ಮಾಡ್ದೆ.'

'ಎಂತ ಮಾರಾಯ ನಿನ್ನ ಗುಡ್ ನ್ಯೂಸ್ ? ಗಾಳಿಮರ ಸೋಮಯ್ಯ ಲಾಕಪ್ ಒಳಗೆ ಸತ್ತೋತಾ ? ಅಲ್ಲಾ ನೀಲುಗೂಡೆ ಸ್ಟೇಶನ್ ಕಂಡ್ ಸೊಯೆ ತಪ್ಪಿ ಬಿದ್ದೋತಾ ಹೆಂಗೆ ?'

'ಅದೆರಡೂ ಅಲ್ಲ ದೇವಯ್ಯಣ್ಣ, ಆ ಚಂಗುಮಣಿ ಸ್ಟೇಷನ್‌ಗೂ, ಫ್ಯಾಕ್ಟ ಮಾದಯ್ಯ ನನ್ನ ಕ್ವಾಟ್ರಸ್‌ಗೂ ಬಂದ್ ಬುಟ್ಟ್ ತಪ್ಪುನ ಒಪ್ಪಿಕೊಂಡೊಳೊ.

ಈಗ ಪೊಲೀಸ್‌ಗೆ ತಲೆ ಬ್ಯಾನೆ ಇಲ್ಲಂಗಾತ್. ಮಾದಯ್ಯ ಹೇಳ್ದ, ಆ ಕೊಲೆನ ನಾನೇ ಮಾಡ್‌ದ್‌ಂತ, ಚಂಗುಮಣಿ ಕೂಡ ಹಂಗೇ ಹೇಳ್ತಾ ಉಟ್ಟ್. ಇಬ್ಬರ್‌ನಾ ನಾವು ಈ ಕೇಸ್‌ಲಿ ಆರೋಪಿಯಾಗಿ ಮಾಡ್ವೆ. ನೀವ್ ಏನಾದ್ರು ಹೇಳಕೆ ಉಟ್ಟಾ ಇದರ್ಲಿತಾ ?'

'ನನ್ನ ಅಭಿಪ್ರಾಯ ಬೇಕಾ ?'

ಕುಸಿಲಿ ದೇವಯ್ಯಂಗೆ ಈಗ ಎಂತ ಹೇಳೋಕೂತ್ಲೇ ಗೊತ್ತಾತ್ಲೆ.

ರಿಸೀವರ್ ಹಿಡ್‌ಕಂಡ್ ಅಂವ ಸೊಲ್ಪ ಹೊತ್ತ್ ಹಂಗೇ ನಿತ್ತ್‌ಕಂಡತ್.

ಚಂಗುಮಣಿ ..ಫ್ಯಾಕ್ಟ್ ಮಾದಯ್ಯ, ಫ್ಯಾಕ್ಟ್ ಮಾದಯ್ಯ—ಚಂಗುಮಣಿ. ಹ್ಣಂ ಇಬ್ಬರೂ ತಪ್ಪುನ ಒಪ್ಪಿಕಂಡ್ ಪೊಲೀಸ್ ಮುಂದೆ ಶರಣಾಗೊಳೊ'.

ದೇವಯ್ಯಂಗೆ ಕುಸಿಯೋ ಕುಸಿ.

'ಹಲೋ ಇಬ್ಬರೂ ಒಟ್ಟಿಗೆ ಬಂದ್ ಸರಂಡರ್ ಆದ್ದಾ ಅಲ್ಲಾ ಬೇರೆ ಬೇರೆ ಬಂದ್ ಒಪ್ಪಿಕಂಡದಾ ?'

'ಬೇರೆ ಬೇರೆ ಬಂದೊ ದೇವಯ್ಯಣ್ಣ ಇಬ್ಬರ್‌ನ ಸಾ ಬೇರೆ ಬೇರೆ ಲಾಕಪ್ ಒಳಗೆ ಹಾಕಿಯೊಳೆ. ಇಬ್ಬರ್‌ನ ಸಾ ಎನ್‌ಕ್ವಯಿರ ಮಾಡದೇ ಬುಡ್‌ದುಲೆ.

'ಹೌದು ಹಂಗೆ ಮಾಡ್‌ದೇ ಒಳ್ಳೆದ್. ಇನ್ನ್ ಆ ಗಾಳಿಮರ ಸೋಮಯ್ಯನೋ ಅವನ ಮಗಳ್ನೂ ಬುಡ್‌ಗಡೆ ಮಾಡಿ ಬುಡ್ದ್ ಒಳ್ಳೆದ್. ನಾಕ್‌ಜನ ಕಾಣೋ ಹಂಗೆ ಆ ಅಪ್ಪ ಮಗಳ್ನ ಪೊಲೀಸ್ ಜೀಪ್‌ಲೇ ಕರ್ಕಂಡ್ ಹೋಗಿ ಮನೆಗೆ ಬುಟ್ಟ್‌ಬುಡಿ. ಆರೋಪಿ ಸಿಕ್ಕಿದರ್‌ಂದ ಇನ್ನ್ ನೀವ್‌ಗೆ ತಲೆ ಬ್ಯಾನೆ ಇಲ್ಲಂಗಾತ್.

ಇನ್ನೊಂದ್ ವಿಷ್ಯ, ಆ ಫ್ಯಾಕ್ಟ್ ಮಾದಯ್ಯ ಊರ್ಲಿ ಎಲ್ಲವ್ಕೂ ಉಪಕಾರ ಮಾಡೋ ಮನ್ಸ. ಅವಂಗೆ ಹೊಡ್ದ್ ಬೆಂಡ್ ಎತ್ತಿರೆ ಊರವು ಸುಮ್ಮನೆ ಇರ್ಕಿಲೆ. ಇನ್ನ್ ಆ ಚೆಂಗುಮಣಿ ಉಟ್ಟಲ್ಲ ಅವನ ಕೊಂದರೂ ಕೇಳವು ಇಲ್ಲೆ. ಗೊತ್ತಾತಲ್ಲ.'

'OK ದೇವಯ್ಯಣ್ಣ'

ಒಂದ್ ಹತ್ತ್ ಹತ್ತೂವರೆ ಗಂಟೆಗೆ ನಾನ್ ಒಮ್ಮೆ ಸ್ಟೇಶನ್‌ಗೆ ಬನ್ನೆ. ಮಂಜನ ಕೊಂದವನ ನಂಗೆ ಒಮ್ಮೆ ನೋಡೊಕು. ಫೋನ್ ಮಡ್ಗಲಾ ?'

ಅಂವ ರಿಸಿವರ್ ಮಡ್ಗಿತ್.

'ಕುಟ್ಟಾ ಬಾರಾ ಇಲ್ಲಿ...ಆ ಸೈಕಲ್ ಉಸ್ಮಾನ್‌ನ ಬಾಕೆ ಹೇಳ್ ಹೋಗ್.'

ಕುಟ್ಟ ಹೋಗಿ ಮೂರು ಜನ ರೌಡಿಗಳ್ನ ಕರ್ಕಂಡೇ ಬಾತ್. [ಸಶೇಷ]

---

ಒಂದ್ ಸಲ ನಮ್ಮ ಕುಞ್ಞಣ್ಣ ಅವನ 10 ವರ್ಷದ ಮಜನ ಕರ್ಕಂಡ್ ಬೆಂಗಳೂರಿಗೆ ಹೋತ್. ಅಲ್ಲಿ ಸಿಟಿ ಮಾರ್ಕೆಟ್‌ಲಿ ಸುತ್ತಾಡಿಕಂಡಿರ್ರ್ಯಾಕನ ಒಂದ್ ಕಡೆ ಚಕ್ಕೋತ ಮಾರ್ತಿದ್ದೊ. ಮಂಜ ಅಪ್ಪನ ಪ್ಯಾಂಟ್ ಹಿಡ್ದ್ ಎರ್ಡ್ ಸಲ ಜಗ್ಗಿತ್—'ಪಪ್ಪ ಪಪ್ಪ ನಂಗೆ ಚಕ್ಕೋತ ತೆಕ್ಕೊಡು'ತ ಕೇಳ್ತ್. ಜಪುಣ ಕುಞ್ಞಣ್ಣ–'ಈಯ...ಚಕ್ಕೋತಾನ ಇದ್ ಚಕ್ಕೋತ ?! ಇದ್ ಕಿತ್ಲೆ ಹುಳಿನಂಗೆ ಉಟ್ಟ್. ನಿಜವಾದ ಚಕ್ಕೋತ ಸಿಕ್ಕುದು ನಮ್ಮ ಚೆಟ್ಟಳ್ಳೀಲೆ ದೊಡ್ಡ ದೊಡ್ಡದ್''ತ ಹೇಳ್ತ್. ಮಜ ಬಾಯಿ ಮುಚ್ಚಿಕಂಡ್ ಮುಂದೆ ನಡ್ತ್.

ಸ್ವಲ್ಪ ದೂರ ನಡ್ದ ಮೇಲೆ ರೋಡ್ ಬದಿಲಿ ಕಿತ್ಲೆ ಹುಳಿ ಮಾರ್ತಿದ್ದೊ. ಅದ್ನ ನೋಡಿ ಮಂಜ ಪುನಃ ಅಪ್ಪನ ಫ್ಯಾಂಟ್ ಜಗ್ಗಿ—'ಪಪ್ಪ, ಪಪ್ಪ ನಂಗೆ ಕಿತ್ಲೆ ಹಣ್ಣ್ ತೆಕ್ಕೊಡು'ತ ಕೇಳ್ತ್. ಕುಞ್ಞಣ್ಣ ತಲೆ ಕೆರ್ಕಂಡ್ 'ಈಯ ಕಿತ್ಲೆಹಣ್ಣಾ ಇದ್ ಕಿತ್ಲೆ ಹಣ್ಣ್ ?! ಇದ್ ನಿಂಬೆ ಹಣ್ಣ್‌ನಂಗುಟ್ಟ್. ನಿಜವಾದ ಕಿತ್ಲೆಹಣ್ಣ್‌ಗ ಸಿಕ್ಕುದು ನಮ್ಮ ಚೆಟ್ಟಳ್ಳೀಲಿ, ದೊಡ್ಡ ದೊಡ್ಡದ್''ತ ಹೇಳ್ತ್. ಮಜಂಗೆ ಈಗ ಸಿಟ್ಟ್ ಬಾತ್. ಆದ್ರೂನೂ ಬಾಯಿ ಮುಚ್ಚಿಕಂಡ್ ಮುಂದೆ ನಡ್ತ್.

ಸ್ವಲ್ಪ ದಿನ ಕಳ್ದ್, ಒಂದಿನ ಮಜ ಅವನ ಸ್ಕೂಲ್‌ಂದ Marks Card ತಂದ್ ಅಪ್ಪಂಗೆ ಕೊಟ್ಟತ್. Marks ನೋಡಿ ಕುಞ್ಞಣ್ಣಂಗೆ ಸಿಟ್ಟ್ ಬಾತ್–'ಎಲ್ಲದ್ರಲ್ಲೂ ಸೊನ್ನೆ ತೆಗೊಂಡ್ಳಲನೇ ನಾಲಾಯಕ್'' ತ ಬೈತ್. ಮಜ ಹೆದ್ರತ್ಲೆ 'ಈಯ...ಅದಿಕ್ಕೆ ಸೊನ್ನೆ ತೇಳುವೇ ಸೊನ್ನೆ ? ನಿಜವಾದ ಸೊನ್ನೆಗ ಸಿಕ್ಕುದು ನಮ್ಮ ಚೆಟ್ಟಳ್ಳೀಲಿ, ದೊಡ್ಡ ದೊಡ್ಡದ್'' ತೇಳ್ತ್. ಕುಞ್ಞಣ್ಣಂಗೆ ಮೈ ಪರಚಿಕಣುವಂಗೆ ಆತ್...ಪಿತ್ತ ನೆತ್ತಿಗೆ ಏರ್ತ್. ಅಂವ ಹಲ್ಲ್ ಕಚ್ಚಿಕಂಡ್ ಸಿಟ್ಟ್‌ಲಿ ಮಜಂಗೆ... 'ನಿನ್ನ ನಿನ್ನ ಪಪ್ಪನೊಟ್ಟಿಗೆ ಹಿಂಗೆನೇ ಮಾತಾಡ್ದು. ಪೊರ್ಕಿ ರಾಸ್ಕಲ್'' ತೇಳ್ತ್. ಮಜ ಪಟ್ಟ್‌ತ—'ಪಪ್ಪನಾ ನೀನ್ ? ಪಪ್ಪಿ ನೀನ್ ಪಪ್ಪಿ ನಿಜವಾದ ಪಪ್ಪಂಗ ಸಿಕ್ಕುದು ಚೆಟ್ಟಳ್ಳೀಲಿ ದೊಡ್ಡ ದೊಡ್ಡವು' ತೇಳಿಬುಟ್ಟ್ ಅಲ್ಲಿಂದ ಓಟ ಕಿತ್ತತ್. ●

—ಎಡಿಕೇರಿ ಸುಧರ್ಶನ್, ಬೆಂಗಳೂರು.

## ನಗೆ ಹನಿಗ

ಬೆಂಗಳೂರ್ನ ನಿಮ್ಹಾನ್ಸ್ ಆಸ್ಪತ್ರೇಲಿ ಹುಚ್ಚರಿಬ್ಬರ್ ಮಾತಾಡ್ತ ಇದ್ದವೆ.

ಒಬ್ಬ ಹುಚ್ಚ : 'ನಾಳೆ ನನ್ನ ಮೊದುವೆ ಗಡ'

ಅದ್ಕೆ ಇನ್ನೊಬ್ಬ : 'ಅದೆಂಗೆ ಆದೇರ, ನಾನ್ ನಿನ್ನನ ನೆನ್ನೆ ಮೊದುವೆ ಆಗೊಳೆ '

—ಕುಟ್ಟನ ದೀಪಕ್ ಸೋಮಯ್ಯ, ಬೆಂಗಳೂರು

# ಕಟ್ಟ್ ಬಳ್ಳಿ ಕುಟ್ಟ್ಕುದೊಣ್ಣೆ (ಅಜ್ಜಿಕಥೆ)

ಒಂದ್ ಊರ್‌ಲಿ ಅವ್ವ ಮತ್ತ್ ಒಬ್ಬ ಮಂಜ ಇಬ್ಬರು ಇದ್ದವೆ ಅವು ತುಂಬಾ ಬಡವು. ಅವು ಸೌದೆಮಾರಿ ಜೀವನ ನಡ್‌ಸ್ತಿದ್ದವೆ.

ಒಂದು ದಿನ ಅಜ್ಜನ ಮಂಜ ಸೌದೆಗಾಗಿ ಕಾಡಿಗೆ ಹೊರಟದೆ. ಆಗ ಅವನ ಅವ್ವ ಅವಂಗೆ ಮೂರು ರೊಟ್ಟಿನ ಮಧ್ಯಾಹ್ನಕ್ಕೆ ಬುತ್ತಿ ಕಟ್ಟಿ ಕೊಟ್ಟದೆ. ಆಗ ಅಂವ ಅದರ ತಕಂಡ್ ಸೌದೆಗೆ ಹೋದೆ. ಸೌದೆ ಎಲ್ಲ ಕಡ್ದ್ ಆಕನ ಮಧ್ಯಾಹ್ನ ಆದೆ. ಅಂವ ಅಲ್ಲೇ ಹತ್ರಲಿ ಒಂದು ಕೆರೆಗೆ ಹೋಗಿ ಕೈಕಾಲ್ ತೊಳ್ದ್ ಕೆರೆಗೆ ಬಂದ್ ಬೆಳಿಗ್ಗೆ ತಂದ ಬುತ್ತಿನ ಬಿಚ್ಚಿದೆ ಆಗ ಅವ್ವ ಹಿಂಗೆ ಹೇಳಿದ್ದದೆ. ಒಂದು ತಿಂದರೆ ಸಾಲ್ದ್, ಎರಡ್ ತಿಂದರೆ ಆಗದ್, ಮೂರು ಬೇಕೆ ಬೇಕು ತೇಳ್ದ್. ಕುದ್ದ ಜಾಗಂದ ಹಿಂದೆ ಒಂದು ದೊಡ್ಡ ಪೊಟರೆ ಮರ ಇದ್ದದೆ. ಆ ಮರದ ಒಳಗೆ ಮೂರ್ ಜನ ಕಳ್ಳರ್ ಇದ್ದವೆ. ಇಂವ ಹೇಳ್ದ ಮಾತ್ ಕಳ್ಳರಿಗೆ ಕೇಳ್ದ್, ಆಗ ಕಳ್ಳರ್ ಗ್ಯಾನ ಮಾಡುವೆ. ಈಗ ನಮ್ಮನೇ ತಿಂದದೆತ. ಆಗ ಅವನ ಹತ್ರ ಬಂದ್ ದಮ್ಮಯ್ಯ ಹೇಳಿ ಅ ನ ಕಾಲಿಗೆ ಅಡ್ಡ ಬಿದ್ದವೆ. ನೀನ್ ನಮ್ಮನ ತಿನ್ನ್‌ಬೇಡ. ನಾವು ನಿಂಗೆ ಒಂದು ಇಕ್ಕ್ ಚಿಟ್ಟೆ ಕೊಟ್ಟವೆತಾ. ಆಗ ಇಂವ ಕೇಳ್ದ್ ಅದರ ಎಂತ ಮಾಡ್ದುತ. ಆಗ ಅವು ಹೇಳುವೆ ನೀನ್ ಸ್ನಾನ ಮಾಡಿ ಆ ಚಿಟ್ಟೆ ಹತ್ರ ಹೋಗಿ ಇಕ್ಕ್‌ಚಿಟ್ಟೆತ ಹೇಳ್ರೆ ಅದ್ ಇಕ್ಕಿದೆತ ಅವು ಹೇಳ್ದೊ. ಆಗ ಅಂವ ಆ ಚಿಟ್ಟನ ತಕಂಡ್ ಮನೆಗೆ ಹೋಕನ ಕತ್ತಲೆ ಆದೆ. ಆಗ ಅಂವ ಒಂದು ಅಜ್ಜಿನ ಮನೆಗೆ ಹೋದೆ. ಆಗ ಅಜ್ಜಿ ಇವಂಗೆ ನೀನ್ ಮಿಯ್ದ್ ಬಾತ ಹೇಳ್ದ್. ಆಗ ಅಜ್ಜಿ ಆ ಚಿಟ್ಟನ ಒಂದು ಮೂಲೆಲಿ ಮಡ್ಗಿ ಅಜ್ಜಿಗೆ ಹೇಳ್ದ್ ಅಜ್ಜಿ ಅಜ್ಜಿ ಈ ಚಿಟ್ಟನ ಮುಟ್ಟ್ ಬಡತ. ಆಗ ಅಜ್ಜಿ ಕೇಳ್ದ್, ಅದ್ ಎಂತತ. ಅದ್ಕೆ ಅಂವ ಹೇಳ್ದ್ ಅದ್ ಇಕ್ಕ್‌ಚಿಟ್ಟೆತ. ಇಂವ ಮಿಯೆಕೆತಾ ಹೋಗಿ ಬಾಕನ ಅಜ್ಜಿ ಆ ಚಿಟ್ಟನ ಬದ್‌ಲ್ಸಿ ಬೇರೆ ಚಿಟ್ಟೆ ಮಡಗಿದೆ. ಬೆಳಿಗ್ಗೆ ಎದ್ದ್ ಇಂವ ಆ ಚಿಟ್ಟನ ತಕಂಡ್ ಮನೆಗೆ ಹೋಗಿ ಈ ಚಿಟ್ಟನ ಲಾಯ್ಕ ಮಡ್ಗಿತೇಳಿ ಅವ್ವನ ಕೈಲಿ ಕೊಟ್ಟದೆ. ಮಾರನೆ ದಿನ ಪುನಃ ಕೆಲಸಕ್ಕೆ 3 ರೊಟ್ಟಿ ತಕಂಡ್ ಹೋದೆ. ಪುನಃ ಹುಂಗೆ 'ಒಂದ್ ತಿಂದರೆ ಸಾಲ್ದ್ ಎರಡ್ ತಿಂದರೆ ಆಗದ್ 3ನ್ನೆ ತಿನ್ನಬೇಕುಂತ' ಹೇಳ್ದ್.

ಕಳ್ಳರ್ ಇವನ ಮಾತ್‌ನ ಕೇಳಿ ಇವಂದ್ ಪುನಃ ರೋಗ ಸುರು ಆತ್‌ತ ಗ್ಯಾನ ಮಾಡಿ ಅವನ ಹತ್ರ ಹೋಗಿ ನೀನ್ ನಮ್ಮನ ತಿನ್ನ್‌ಬಡ, ನಾವು ನಿಂಗೆ ಕಾರ್ ಕುದುರೆ ಕೊಟ್ಟವೆತ ಹೇಳ್ತ್. ಇವಂಗೆ ಖುಷಿ ಆದೆ ಇಂವ ಕೇಳ್ದ್ ಅದರ ಎಂತ ಮಾಡ್ದುತ. ಆಗ ಅವು ಹೇಳುವೆ ನೀನ್ ಅದರ ಕಾರ್ ಕುದುರೇತ ಹೇಳ್ರೆ ಅದ್ ನಿಂಗೆ ಬೇಕಾದಷ್ಟ್ ಹಣ ಕಾರ್‌ದೆತ. ಇಂವ ಇದರ ತಕಂಡ್ ಮನೆಗೆ ಹೋಕನ ಕತ್ತಲೆ ಆದೆ. ಪುನಃ ಆ ಅಜ್ಜಿನ ಮನೆಗೆ ಹೋದೆ. ಇವನ ಮಿಯಕೆತ ಹೋಕೆ ಹೇಳ್ದ್. ಇಂವ ಈ ಕುದುರೆನ ಮುಟ್ಟ್‌ಬಡತ. ಆ ಅಜ್ಜಿನ ಒಟ್ಟಿಗೆ ಹೇಳ್ದ್. ಆಗ ಆ ಅಜ್ಜಿನ ಹತ್ರ ಗಂಡ ತೆಗ್ದ್ ಕೊಟ್ಟ ಒಂದು ಕುದುರೆ ಇದ್ದದೆ. ಆ ಕುದುರೆನ ಮಡ್ಗಿ ಆ ಕಾರ್ ಕುದುರೆನ ಅಣ್‌ಂಗಿಸಿ ಮಡ್ಗಿದೆ. ಇಂವ ಬೆಳಿಗ್ಗೆ ಎದ್ದ್ ಆ ಕುದುರೆನ ತಕಂಡ್ ಹೋಗಿ ಅವ್ವನ ಕೈಲಿ ಕೊಟ್ಟದೆ. ಅವ್ವ ಇದರ ಲಾಯ್ಕ್‌ಲಿ ಮಡ್ಗ್‌ತಾ ಹೇಳ್ತ್. ಮಾರನೆ ದಿನ ಪುನಃ ಕೆಲಸಕ್ಕೆ ಹೋದೆ 3ರೊಟ್ಟಿ ಅವ್ವ ಬುತ್ತಿ ಕೊಟ್ಟ್‌ಕಳ್ಸದೆ. ಮೂರನೆ ದಿನ ಪುನಃ ಹುಂಗೆ 'ಒಂದ್ ತಿಂದರೆ ಸಾಲ್ದ್, ಎರಡ್ ತಿಂದರೆ ಆಗದ್, ಮೂರನ್ನೇ ತಿನ್ನಕುತ ಹೇಳ್ದ್. ಆ ಕಳ್ಳರ್ ಇವನ ರೋಗ ಸುರು ಆತ್‌ತ ಗ್ಯಾನಮಾಡಿ ಕಳ್ಳರ್ ಬಂದ್ ಇವಂಗೆ ಹೇಳುವೆ ನೀನ್ ನಮ್ಮನ ತಿನ್ನ್‌ಬಡ, ನಾವು ನಿಂಗೆ ಕಟ್ಟ್ ಬಳ್ಳಿ ಕುಟ್ಟ್ ದೊಣ್ಣೆ ಕೊಟ್ಟವೇತ. ಆಗ ಇಂವ ಕೇಳ್ದ್ ಹುಂಗೆ ಹೇಳ್ರೆ ಎಂತ. ಅದ್ ನಿಂಗೆ ಕಷ್ಟ ಕಾಲಕ್ಕೆ ಎಲ್ಲಾ ಒಳ್ಳೆದ್ ಆದೇತ. ನಿಂಗೆ ಯಾರಾರ್ ಹೊಡೆಕೆ ಬಾಕನ ನೀನ್ ಕಟ್ಟ್ ಬಳ್ಳಿ ಕುಟ್ಟ್ ದೊಣ್ಣೆತ ಹೇಳ್ರೆ ಅವರ ಕಟ್ಟಿ ಲಾಯಕ್ ಕುಟ್ಟದೆತ ಹೇಳ್ವೆ. ಇಂವ ಇದರ ತಕಂಡ್ ಮನೆಗೆ ಹೋಕಾಕನ ಕತ್ತಲೆ ಆದೆ. ಆ ಅಜ್ಜಿನ ಮನೆಗೆ ಹೋಗಿ ಮೂಲೆಲಿ ಮಡ್ಗಿ ಮೀಯಕೇತ ಹೋಕನ ಅಜ್ಜಿ ಕೇಳ್ದ್ ಅದ್ ಎಂತತ. ಆಗ ಅಂವ ಹೇಳ್ದ್ ಅದ್ ಬೇಕುತ. ಆ ಅಜ್ಜಿ ಅದರ ಕದ್ದ್ ಬೇರೆ ಬಳ್ಳಿ ಮತ್ತೆ ದೊಣ್ಣೆ ಮಡ್ಗಿದೆ. ಇಂವ ಬೆಳಿಗ್ಗೆ ಎದ್ದ್ ಮನೆಗೆ ಹೋಗಿ ಅವ್ವನ ಒಟ್ಟಿಗೆ ಹೇಳ್ದ್. ಅವ್ವ ನಾನ್ ಕೆಲಸಕ್ಕೆ ಹೋದು ಸಾಕ್. ಇಷ್ಟ ಸಂಪಾದನೆ ಮಾಡ್ದ್ ಸಾಕ್‌ತೇಳಿ ನಾನ್ ಮೊನ್ನೆ ತಂದ ಇಕ್ಕ್ ಚಿಟ್ಟೆ ಕೊಡುತ ಅವ್ವನ ಕೇಳ್ದ್. ಇದರ ಮಡ್ಗಿ ಇಂವ ಮಿಯಕೆ ಹೋಗಿ ಬಂದ್ ಇಕ್ಕ್ ಚಟ್ಟೆತ ಹೇಳ್ದ್. ಅದ್ ಇಕ್ಕುದೇಲೆ. ಕಾರ್ ಕುದುರೆಗೆ ಕಾರ್ ಕುದುರೆತ ಹೇಳ್ದ್. ಅದ್‌ಸ ಕಾರ್ದುಲೆ ಒಂದು ಮರದ ಹತ್ರ ಹೋಗಿ ದೊಣ್ಣೆನ ನಿಲ್ಲಿಸಿ ಹಗ್ಗನ ಮಡ್ಗಿ ಕಟ್ಟ್ ಬಳ್ಳಿ ಕುಟ್ಟ್ ದೊಣ್ಣೆತ ಹೇಳ್ಕನ ಸುಮ್ಮನೆ ಆಕಂಡತ್. ಇದ್ ಆ ಅಜ್ಜಿನ ಕೆಲಸ ತೇಳಿ ಅಜ್ಜಿನ ಹತ್ರ ಹೋಗಿ ಅಜ್ಜಿ ನಿನ್ನ ಹತ್ರ ಆ ಕಟ್ಟ್ ಬಳ್ಳಿ ಕುಟ್ಟ್ ದೊಣ್ಣೆಯಿಟ್ಟ್, ಅದ್ ಕೊಡುತ

[ 20ನೇ ಪುಟ ನೋಡಿ ]

## ಅಂಬಾಡಿನ ಕಥೆ

ಅಂಬಾಡಿನ ಕತೆ ಉಟ್ಟ್ ಹೇಂಗೆಂತ ಎಲ್ಲ
ಕುದ್ದ್‌ಕಂಡ್ ಕೇಳಿ್ರ ನೀವ್ ಹೇಳ್ನೆ ನಾನೆಲ್ಲ
ನಮ್ಮೂರ ಅಂಬಾಡಿ ಎಂಥ ಜನ
ಬೊಯಿದೆವೆ ಅವಂಗೆಲ್ಲ ಊರ ಜನ ॥

ಅಂಬಾಡಿಗೆ ಶಕ್ತಿ ಮೈ ತುಂಬಾ ಇದ್ರ್
ಇಬ್ಬರ ಹೊರೆನಂವ ಒಬ್ಬನೆ ಹೊರ್ದ
ಬೊಳುವುಗೆ ಎದ್ದ್ ಹಸಿಹುಲ್ಲು ಹೆದ್ರ್
ಯಾರ್‍ಯಾರ ತೋಟಂದ ಕದಂವ ತಾದು ॥

ಹತ್ತ್ ಗಂಟೆಗೆ ಅವಂಗೆ ತಿಂಬಕೆ ಬೇಕು
ರೊಟ್ಟಿಯಾದರೆ ಅವಂಗೆ ಏಳೆಂಟೆ ಸಾಕ್
ಸೊಪ್ಪುಗೆ ಹೋನೆಂತ ಕಾಡ್‌ಗೆ ಹೋದರೆ
ಕೆಳಗೆ ಮನೆ ಚಾಳೆಲಿ ಕುದ್ದ್‌ಕಂಡ್ ಇದ್ದದೆ ॥

ಚಾಳೆಲಿ ತಿಂಬೋದು ಅಂವ ಬೆಂಡನಕಡ್ದ್
ಒಂದಿನ ಬಿದ್ದೋತ್ ಕೊತ್ತಳಿಕೆ ತಡ್ದ್
ಬೀಳ್‌ಕನ ಗಾಯಾಗಿ ರಕ್ತನು ಬಾತ್
ಮೆಲ್ಲ ಮೆಲ್ಲ ಹೇಂಟಿಕಂಡ್ ಮನೆಗಂವ ಹೋತ್ ॥

ಇಂಥ ಪೆಟ್ಟ್‌ನ ಅಂಬಾಡಿ ತಿಂದುಟ್ಟ್ ತುಂಬ
ಕಾಂಬಕೆ ಅಂವ ದೊಡ್ಡ ಕಲ್ಲ್‌ನ ಕಂಬ
ಕೋಣಗಳ ಓಡ್ಸಿಕೆ ಅಂಬಾಡಿ ಮುಂದೆ
ಪಂಥಕೆ ಓಡ್ಸಿರೆ ಅಂವ ಎಲ್ಲಂದ್ರ ಹಿಂದೆ ॥

ನಮ್ಮೂರ್‍ಲಿ ಅಂಬಾಡಿ ಹೂಡಿಕೆ ಜಾಣ
ನಿಧಾನಲಿ ನಡ್ಯದಂವ ಸಾಕಿದ ಕೋಣ
ಅಂಬಾಡಿ ಮಲ್ಗುದು ತೋಟದ ಒಳಗೆ
ಕದ್ದ್ ಹೋದರೆ ಗೊತ್ತ್‌ಲೆ ನಿದ್ದೆಲಿ ಅವರಿಗೆ ॥

ಅಂಬಾಡಿ ಮೀನಿಡೆಕೆ ಹೋದರೆ ನೀರ್‌ಲಿ
ಮನೆಗೆ ಬಾಕನ್ ಮೀನ್ ಯಾರ್‍ಯಾರ ಕೈಲಿ
ಮೀನಿಡೆಕೆ ಹೋಕನ ಉಂಡೋದು ಗಂಜಿ
ಒಂದಿನ ಅಂಬಾಡಿಗೆ ಕಚ್ಚಿತ್ ಮಡ್‌ಂಜಿ ॥

ಅಂಬಾಡಿನ ಸಂಬಳಕೆ ಕೆಲ್ಸನೆ ಇಲ್ಲೆ
ಅವನಸ್ಟ್ ತಿಂಬವನ ನಾಕಂಡತ್ಲೆ
ನಿದ್ದೆ ಮಾತ್ರ ಅಂಬಾಡಿಗೆ ಹೆಚ್ಚಿಗೆ ಬೇಡ
ಮೊಲಿಗಿರೆ ಎದ್ರುದು ಎಲ್ಲಂದ್ರ ತಡ ॥

ಮರಹತ್ತುವ ಹುಚ್ಚಿ ಅಂಬಾಡಿಗೆ ಇದ್ರ್
ಹತ್ತಿರೆ ಬೀಳ್ದಂವ ಗೆಲ್ಲೆಲ್ಲಾ ಮುರ್ದ್
ಸಾಧು ಬೀಡಿ ಬೇಕವಂಗೆ ಹದಿನೈದು ಕಟ್ಟ್
ವಾರಕಲ್ಲಾ ಅಂವ ದಿನ ಎಳೆದು ಅಷ್ಟ್ ॥

ಅಂಬಾಡಿ ಮಾಡದ ಕೆಲ್ಸನೆ ಇಲ್ಲೆ
ಅಂವ ಮಾಡ್ದ ಕೆಲ್ಸಕೆ ಅರ್ಥನೆ ಇಲ್ಲೆ
ಪೇಟೆಗೆ ಹೋದರೆ ಅಂಬಾಡಿಗೆ ಸೊಕ್ಕು
ಅಂಗಡಿಲಿ ಕಂಡದ್ ಎಲ್ಲವಂಗೆ ಬೇಕು ॥

ಅಂಬಾಡಿ ಬಸ್‌ಲಿ ಕುದ್ರಟನೆ ಇಲ್ಲೆ
ಅಂವ ಕುದ್ದರೆ ಉಳ್ದವುಕೆ ಜಾಗೆನೆ ಇಲ್ಲೆ
ದನ ಮೇಸಿಕೆ ಅಂಬಾಡಿ ಕಾಡಿಗೆ ಹೋದು
ಹಿಂಬತ್ತ್ ಬಾಕನ ಒಬ್ಬನೆ ಬಾದು ॥

ಅಂಬಾಡಿನ ಗುಟ್ಟ್ ಇನ್ನೆಷ್ಟೊ ಉಟ್ಟ್
ಯಾಕೆ ಹೇಳಲಿ ಇನ್ನ್ ಹೆಚ್ಚಿನ ಗುಟ್ಟ್
ಅಂಬಾಡಿನ ಹಾಂಗೆ ನೀವು ಯಾರಾದು ಬೇಡ
ಅಂವ ತಿಂದ ಬೊಯಿಗಳ ಯಾರಿಗೂ ಬೇಡ ॥

ಅಂಬಾಡಿನ ಕಥೆ ಮತ್ತೆ ಹಿಂಗೆಲ್ಲ ಮುಗ್ತ್
ಕೇಳಿ ತಿಳ್‌ಕಣಿ ನೀವು ಊರವುಕೆ ಗೊತ್ತ್ ॥

—ಸಂಗ್ರಹ : ಮುದ್ದೇನ ಪ್ರವೀಣ್ ಉತ್ತಯ್ಯ,
ಮದೆನಾಡು.

[ 19ನೇ ಪುಟದಿಂದ ]

ಕೇಳ್ದ್. ಆ ಅಜ್ಜ ದೊಣ್ಣೆ ಕಂಡತೇಲೆತ ವಾದ ಮಾಡ್ತ್. ಇಂವ ಮನಸ್ಸಲೆ ಕಟ್ಟ್ ಬಳ್ಳಿ ಕುಟ್ಟ್ ದೊಣ್ಣೆತ ಹೇಳ್ತ್. ಆ ಅಜ್ಜನ ಆ ಬಳ್ಳಿ ಸುತ್ತಿಕಂಡ್ ಲಾಯ್‌ಕಲಿ ಕುಟ್ಟಿತ್. ಆಗ ಆ ಅಜ್ಜ ದಮ್ಮಯ್ಯ ಅಣ್ಣ ಒಮ್ಮೆ ಇದರ ನಿಲ್ಸತ ಹೇಳ್ದ್. ಮತ್ತೆ ಆ ಚೆಟ್ಟನ, ಕಾರ್ ಕುದುರೆನ ತಂದ್ ಕೊಟ್ಟದೆ, ನಿಮ್ಮ ಮನೆಲಿ ಅಜ್ಜಿಕ ಹಿಂಗೆ ಮಾಡದಂಗೆ ಎಚ್ಚರಲಿ ನೋಡಿಕಣಿ. ನಾನ್ ದಿನಾ ಇಕ್ಕ್ ಚೆಟ್ಟ ಮನೆಗೆ ಊಟಕ್ಕೆ ಹೋದು. ಬೇಕರೆ ನೀವು ಸನ ಬನ್ನಿ. ●

ಸಂಗ್ರಹ : ಕುಟ್ಟಿನ ಪಾಪಯ್ಯ ಪುರುಷೋತ್ತಮ
ಚೇರಂಬಾಣೆ.

# ಆಯ್ಕೆ ಮತ್ತು ಉದ್ಯೋಗ ವಾರ್ತೆ

**ಆರ್ಮಿ ಆಯ್ಕೆ :** ಇಂಡಿಯನ್ ಆರ್ಮಿಗೆ ಎಸ್ಸೆಸೆಲ್ಸಿ ಪಾಸಾದ ಯುವಕರನ್ನು ಇದೇ ತಾರೀಖು **20-5-99** ರಂದು ಮಡಿಕೇರಿಯಲ್ಲಿ ಆಯ್ಕೆ ಮಾಡುತ್ತಾರೆ. ಸರಿಯಾದ ಅರ್ಹತೆ ಇರುವವರಿಗೆ ಓಡಲು ಹಾರಲು, ಬರೆಯಲು ಪರೀಕ್ಷೆ ಇರುತ್ತದೆ. ಸುಮಾರು ಮಕ್ಕಳು ಓಡಲು, ಹಾರಲು ಪಾಸಾದರೂ ಬರೆಯುವ ಪರೀಕ್ಷೆಯಲ್ಲಿ ಆಯ್ಕೆ ಆಗುವುದಿಲ್ಲ. ಅಂತವರ ಆಯ್ಕೆಯನ್ನು ಸುಗಮಗೊಳಿಸಲು ಇದೇ ಮೇ ಮೊದಲ ವಾರದಲ್ಲಿ ಮಡಿಕೇರಿಯಲ್ಲಿ 15 ದಿನಗಳ ಕೋಚಿಂಗ್ ಶಿಬಿರ ಶುರುವಾಗುವುದು. ಅನುಭವಸ್ಥ ಸೇನಾಧಿಕಾರಿಗಳು ತರಬೇತಿ ಕೊಡಲಿದ್ದಾರೆ. ಇಚ್ಛಿಸುವವರು ಇದರ ಪ್ರಯೋಜನವನ್ನು ಪಡೆಯಬಹುದು. **ಸ್ಥಳ : ಮಡಿಕೇರಿ ಪೊಲೀಸ್ ಮೈದಾನ.**

**ಸಿ. ಡಿ. ಎಸ್. ಪರೀಕ್ಷೆ :** ಯೂನಿಯನ್ ಪಬ್ಲಿಕ್ ಸರ್ವಿಸ್ ಕಮೀಷನ್ 1999ನೇ ಸಪ್ಟೆಂಬರ್ ನಲ್ಲಿ ಕಂಬೈಂಡ್ ಡಿಫೆನ್ಸ್ ಸರ್ವೀಸಸ್ ಪರೀಕ್ಷೆಗೆ ಅರ್ಜಿಯನ್ನು ಕರೆದಿರುತ್ತಾರೆ. ಡೆಹರಡೂನ್‌ನ ಮಿಲಿಟರಿ ಅಕಾಡಮಿಗೆ 220 ಸ್ಥಾನ, ಹೈದರಬಾದಿನ ಏರ್‌ಫೋರ್ಸ್ ಸ್ಟೇಷನ್‌ನಲ್ಲಿ 44 ಸ್ಥಾನ, ಚೆನ್ನೈಯ ಆಫೀಸರ್‌ಸ್ ಟ್ರೈನಿಂಗ್ ಅಕಾಡಮಿಗೆ 220 ಸ್ಥಾನಗಳಿಗೆ ಅಭ್ಯರ್ಥಿಗಳ ಆಯ್ಕೆ ನಡೆಯಲಾಗುವುದು. ವಯಸ್ಸು—18 ರಿಂದ 24ರ ಒಳಗೆ ಡಿಗ್ರಿಯಾದವರು ಸಹ ಅರ್ಜಿ ಸಲ್ಲಿಸುವುದಲ್ಲದೆ ಡೆಲ್ಲಿಯ ಪದವಿ ಕಾರ್ಯಾಲಯಕ್ಕೆ ತಲುಪಿಸುವ ಕಡೆಯ ದಿನಾಂಕ 3-5-1999.

**ಏರ್‌ಫೋರ್ಸ್ :** ಇಂಡಿಯನ್ ಏರ್‌ಫೋರ್ಸ್‌ನ ಅಡ್ಮಿನಿಸ್ಟ್ರೇಟಿವ್ ಬ್ರಾಂಚ್‌ಗೆ [ಶಾರ್ಟ್ ಸರ್ವಿಸ್ ಕಮಿಷನ್] 19 ರಿಂದ 22 ವರ್ಷದೊಳಗಿನ ಫಸ್ಟ್‌ಕ್ಲಾಸ್ ಡಿಗ್ರಿ ಪಡೆದ ಯುವಕರಿಂದ ಅರ್ಜಿ ಕರೆಯಲಾಗಿದೆ. ಡೆಲ್ಲಿಗೆ ತಲುಪಿಸುವ ಕಡೆಯ ದಿನಾಂಕ **24-4-99**.

**ನೇವಲ್ ಇಂಜಿನಿಯರ್ಸ್ !** ಬೇರೆ ಬೇರೆ ಇಂಜಿನಿಯರಿಂಗ್, ಡಿಗ್ರಿ ಆಗಿರುವ ಯುವಕರಿಂದ ಇಂಡಿಯನ್ ನೇವಿಯ ಟೆಕ್‌ನಿಕಲ್ ಬ್ರಾಂಚ್‌ಗೆ ಸಾರ್ಟ್ ಸರ್ವಿಸ್ ಕಮಿಷಂಡ್ ಡೆಲ್ಲಿಯ ಅಧಿಕಾರಿಗಳಿಗೆ ಅರ್ಜಿ ತಲುಪಿಸಲು ಕೊನೆಯ ದಿನಾಂಕ **25-4-99**.

K R N N-240 10-01-96 TCI Kar. 09592

ಸಂ. 47ನೇ

# ಗೌಡ ಮಹಿಳಾ ಒಕ್ಕೂಟ ಕೊಡಗು [ರಿ.]

ಗೌಡ ವಿದ್ಯಾ ಸಂಘ ಕಟ್ಟಡ, ಗುಡ್ಡೆಮನೆ ಅಪ್ಪಯ್ಯ ಗೌಡ ರಸ್ತೆ, ಮಡಿಕೇರಿ.

**1998-99ನೇ ಸಾಲಿನ**

## ಪ್ರಥಮ ಸರ್ವಸದಸ್ಯರ

## ವಾರ್ಷಿಕ ಮಹಾಸಭೆ ಮತ್ತು ಪ್ರಥಮ ವಾರ್ಷಿಕೋತ್ಸವದ

## — ಆಹ್ವಾನ ಪತ್ರಿಕೆ —

ಈ ಒಕ್ಕೂಟದ ಪ್ರಥಮ ಮಹಾಸಭೆಯು 1999ನೇ ಇಸವಿ ಮೇ ತಿಂಗಳ **11ನೇ ಮಂಗಳವಾರ** ಪೂರ್ವಾಹ್ನ 10-30 ಗಂಟೆಗೆ ಸರಿಯಾಗಿ ಒಕ್ಕೂಟದ ಅಧ್ಯಕ್ಷರಾದ **ಶ್ರೀಮತಿ ಚೀಯಂಡಿರ ರಾಧ ಯಾದವ** ರವರ ಅಧ್ಯಕ್ಷತೆಯಲ್ಲಿ ಕೆಳಗಿನ ಗೌಡ ಸಮಾಜ, ಮಡಿಕೇರಿ ಇಲ್ಲಿ ನಡೆಯಲಿದೆ. ಅದೇ ದಿನ ಪೂ. 11-30 ರಿಂದ ಅ. 4-30 ಗಂಟೆಯವರೆಗೆ ವಾರ್ಷಿಕೋತ್ಸವದ ಕಾರ್ಯಕ್ರಮ ನಡೆಯಲಿದೆ.

ಒಕ್ಕೂಟದ ಸದಸ್ಯರೆಲ್ಲರೂ ಸಮಯಕ್ಕೆ ಸರಿಯಾಗಿ ಆಗಮಿಸಿ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಲು ಸಹಕರಿಸಬೇಕಾಗಿ ವಿನಂತಿ.

ಮಡಿಕೇರಿ
ತಾ. 5-4-1999

ಅಧ್ಯಕ್ಷರು ಮತ್ತು ಆಡಳಿತ
ಮಂಡಳಿ ಸದಸ್ಯರು

### — ಕಾರ್ಯಕ್ರಮ —

1. ಪ್ರಾರ್ಥನೆ 2. ಸ್ವಾಗತ ಭಾಷಣ 3. ಆಡಳಿತ ಮಂಡಳಿಯ ವರದಿ ಮಂಡನೆ
4. 1998-99ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಮಂಡನೆ 5 ಠರಾವು ಮತ್ತು ಪ್ರಶ್ನೆಗಳಿದ್ದಲ್ಲಿ ದಿನಾಂಕ 30-4-99ರ ಒಳಗೆ ಸಂಘದ ಕಛೇರಿಗೆ ತಲುಪಿಸುವುದು
6. ಮಧ್ಯಾಹ್ನದ ಊಟದ ವ್ಯವಸ್ಥೆ ಇದೆ 7. ವಾರ್ಷಿಕೋತ್ಸವದ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮ ಇರುತ್ತದೆ

Kodagu Sangathi Kannada fortnightly Edited, Published, Printed & Owned by Pattada P Sheelamani, No. 35, Savitha Nilaya, I Cross, 4th Block, Jayalaxmipuram, Mysore-570 012. And Printed at Ashirwad Printers, 180/A, 6th Main, Vinayakanagar, Mysore-570 012.
Tele : Office : 0821 / 516771.